MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್ Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

ಸಂಪುಟ: 04 | ಸಂಚಿಕೆ: 328 | ಭಾನುವಾರ : 19–10–2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2–00

VOLUME: 04 | ISSUE: 328 | SUNDAY : 19–10–2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಯಾವುದೇ ಸಂಘ ಸಂಸ್ಥೆ ಗುರಿಯಾಗಿಸಿಲ್ಲ: ಸಿಎಂ



**ಮೈಸೂರು, ಅ. 18–** ಸಾರ್ವಜನಿಕ ಸ್ಥಳಗಳಲ್ಲಿ ಸಂಘ ಸಂಸ್ಥೆಗಳ ಚಟುವಟಿಕೆಗಳಿಗೆ ಪೂರ್ವಾನುಮತಿ ಪಡೆಯಬೇಕು ಎಂಬ ಆದೇಶವನ್ನು ಆರ್‌ಎಸ್‌ಎಸ್ ಸೇರಿದಂತೆ ಯಾವುದೇ ನಿರ್ಧಿಷ್ಟ ಸಂಘ ಸಂಸ್ಥೆಗಳನ್ನು ಗುರಿಯಾಗಿಸಿ ಹೊರಡಿಸಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಡಾದ ಅವರು, ಯಾವುದೇ ಸಂಘ ಸಂಸ್ಥೆಗಳು ಚಟುವಟಿಕೆಗಳನ್ನು ನಡೆಸುವಾಗ ಜನರಿಗೆ ತೊಂದರೆಯಾಗಬಾರದು. ಆ ಕಾರಣಕ್ಕೆ ಸಾರ್ವಜನಿಕ ಸ್ಥಳಗಳಲ್ಲಿ ಚಟುವಟಿಕೆಗಳು ನಡೆಯುವಾಗ ಪೂರ್ವಾನುಮತಿ ಪಡೆಯಬೇಕು ಎಂಬ ಆದೇಶವನ್ನು ಹೊರಡಿಸಲಾಗಿದೆ. ಇದರಲ್ಲಿ ಯಾವುದೇ ಸಂಘ ಸಂಸ್ಥೆಗಳನ್ನು ಗುರಿಯಾಗಿಸಿಲ್ಲ ಎಂದರು.ಈ ಆದೇಶವನ್ನು ಈ ಹಿಂದೆಯೇ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಯಾಗಿದ್ದಾಗ ಹೊರಡಿಸಲಾಗಿತ್ತು. ಆಗ ಈ ಆದೇಶವನ್ನು ಯಾರೂ ಪ್ರಶ್ನಿಸಲಿಲ್ಲ. ಅದೇ ಆದೇಶವನ್ನು ನಾವು ಈಗ ಪುನರ್ ಹೊರಡಿಸಿದ್ದೇವೆ ಅಷ್ಟೇ. ಈಗ ಏಕೆ ಈ ಬಗ್ಗೆ ವಿರೋಧ, ಚರ್ಚೆ ಎಂದು ಪ್ರಶ್ನಿಸಿದರು.

ಕಲ್ಬುರ್ಗಿಯ ಚಿತ್ತಾಪುರದಲ್ಲಿ ನಾಳೆ ನಡೆಯಲಿರುವ ಆರ್‌ಎಸ್‌ಎಸ್ ಪಥಸಂಚಲನದ ಬಗ್ಗೆ ಕೇಳಲಾದ ಪ್ರಶ್ನೆಗೆ, ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಮಾಹಿತಿ ಪಡೆದು ಮಾತನಾಡುತ್ತೇನೆ. ಇಲ್ಲಿ ಶಾಂತಿಗೆ ಭಂಗವಾಗದಂತೆ ಪೊಲೀಸರು ನೋಡಿಕೊಳ್ಳುತ್ತಾರೆ ಎಂದರು.ಬಿಜೆಪಿ ಎಲ್ಲಾ ವಿಚಾರದಲ್ಲೂ ರಾಜಕೀಯ ಮಾಡುತ್ತಿದೆ. ಜನರ ಹಿತ ಚಿಂತನೆಯನ್ನು ಮರೆತಿದೆ ಎಂದು ಅವರು ಟೀಕಿಸಿದರು.ರಾಜ್ಯದಲ್ಲಿ ಗುತ್ತಿಗೆದಾರರ ಬಾಕಿ ಹಣ ಬಿಡುಗಡೆಯಾಗದ ಬಗ್ಗೆ ಹಾಗೂ ಕಮೀಷನ್ ಹಾವಳಿ ಬಗ್ಗೆ ಗುತ್ತಿಗೆದಾರರ ಸಂಘ ರಾಜ್ಯಪಾಲರಿಗೆ ದೂರು ನೀಡುವುದಾಗಿ ಹೇಳಿರುವ ಕುರಿಚು ಪ್ರತಿಕ್ರಿಯಿಸಿದ ಅವರು, ಇದನ್ನು ಸಂಬಂಧಪಟ್ಟ ಸಚಿವರು ನೋಡಿಕೊಳ್ಳುತ್ತಾರೆ. ಅವರೇ ಈ ಬಗ್ಗೆ ಕ್ರಮ ಕೈಗೊಳ್ಳುವರು ಎಂದರು.

ಮೈಸೂರಿನಲ್ಲಿ ನಿನ್ನೆ ನಡೆದ ಉದ್ಯೋಗ ಮೇಳ ಯಶಸ್ವಿಯಾಗಿದೆ. ಈ ಉದ್ಯೋಗ ಮೇಳವನ್ನು ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಹಮ್ಮಿಕೊಳ್ಳಲಾಗುವುದು ಎಂದು ಅವರು ಹೇಳಿದರು.

## ವಿಶ್ವ ಮಾನಸಿಕ ಆರೋಗ್ಯ ದಿನದ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮ




ಯುವ ಮಾರ್ಗ ಸುದ್ದಿ

**ಮಾನ್ವಿ,ಅ.18–**ಪಟ್ಟಣದ ತಾಲೂಕು ಆರೋಗ್ಯಇಲಾಖೆಯ ಸಭಾಂಗಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ ,ತಾಲೂಕು ನ್ಯಾಯವಾದಿಗಳ ಸಂಘ ಹಾಗೂ ಆರೋಗ್ಯ ಇಲಾಖೆ ,ಮನೋರೋಗ ವಿಭಾಗ ರಿಮ್ಸ್ ಸಂಯುಕ್ತಾಶ್ರಯದಲ್ಲಿ ನಡೆದ ವಿಶ್ವ ಮಾನಸಿಕ ಆರೋಗ್ಯ ದಿನದ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಹಿರಿಯ ಸಿವಿಲ್ ನ್ಯಾಯಾಧೀಶರಾದ ಶಿವರಾಜ ವಿ.ಸಿದ್ದೇಶ್ವರ ಉದ್ಘಾಟಿಸಿ ಮಾತನಾಡಿ ಸದೃಡವಾದ ದೇಹಕ್ಕೆ ಸಧೃಡವಾದ ಮನಸ್ಸು ಅಗತ್ಯ ಅದ್ದರಿಂದ ಪ್ರತಿಯೊಬ್ಬರು ಕೂಡ ಅರೋಗ್ಯ ಪೂರ್ಣ ಮನಸ್ಸು ಹೊಂದುವುದಕ್ಕೆ ಎಲ್ಲಾ **(2ನೇಪುಟಕ್ಕೆ...)**

## ಅರ್ಹ ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿ ಮಾಡಿಸಲಿ: ಈಶ್ವರ್ ಕಾಂದೂ

ಯುವ ಮಾರ್ಗ ಸುದ್ದಿ

**ರಾಯಚೂರು,ಅ.18–**ಅರ್ಹ ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರ ನೋಂದಣಿ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಎಂದು ಕನಾ ್ಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರ ನೋಂದಣಿ ಪ್ರಕ್ರಿಯೆ ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರ ಆಗಿರುವ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವ ಹಣಾಧಿಕಾರಿಗಳಾದ ಈಶ್ವರ್ ಕಾಂದೂ ಅವರು ಸಲಹೆ ಮಾಡಿದರು.



ಜಿಲ್ಲಾ ಪಂಚಾಯತ್ ಕಚೇರಿಯ ಜಲನಿರ್ಮಲ ಸಭಾಂಗಣದಲ್ಲಿ ಅಕ್ಟೋಬರ್ 17ರಂದು ನಡೆದ ಜಿಲ್ಲಾಮಟ್ಟದ ಸ್ವೀಪ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅರ್ಹತಾ ದಿನಾಂಕ 01.11.2025ಕ್ಕೆ ಅನ್ವಯಸುವಂತೆ ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯನ್ನು ನೂತನವಾಗಿ ಸಿದ್ಧಪಡಿಸಲು ಭಾರತ ಚುನಾವಣಾ ಆಯೋಗವು ಸೂಚನೆ ನೀಡಿದೆ. ನಮೂನೆ 19ರಲ್ಲಿನ ಅರ್ಜಿಯನ್ನು ಸ್ವೀಕರಿಸಲು 06ನೇ ನವಂಬರ್ 2025 ಕೊನೆಯ ದಿನವಾಗಿದೆ. ಕರಡು ಮತದಾರರ ಪಟ್ಟಿಯನ್ನು 25ನೇ ನವೆಂಬರ್ 2025ರಂದು ಪ್ರಕಟಣೆ ಮಾಡಲಾಗುತ್ತದೆ. 25ನೇ ನವೆಂಬರ್ 2025ರಿಂದ 10ನೇ ಡಿಸೆಂಬರ್ 2025ರ ಅವಧಿವರೆಗೆ ಹಕ್ಕು ಮತ್ತು ಆಕ್ಷೇಪಣೆಗಳಿಗೆ ಅವಕಾಶ ನೀಡಲಾಗಿದೆ. 30ನೇ ಡಿಸೆಂಬರ್ 2025ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಣೆ ಮಾಡಲಾಗುತ್ತದೆ.

ಈ ಮತದಾರ ನೋಂದಣಿ ಪ್ರಕ್ರಿಯೆ ಮುಕ್ತಾಯಗೊಳ್ಳುವವರೆಗೆ ಅರ್ಹ ವ್ಮತದಾರರನ್ನ ಗುರುತಿಸಿ ನೋಂದಣಿ ಮಾಡಿಸುವಲ್ಲಿ ಎಲ್ಲ ರೀತಿಯ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಾದ ಕುಲಪತಿಗಳು, ಪ್ರಾಂಶುಪಾಲರು, ಮುಖ್ಯಾಧ್ಯಾಪಕರು ಹಾಗೂ ಇತರೆ ಸಮುಚಿತವೆನಿಸುವ ಇಲಾಖೆಗಳ ಅಧಿಕಾರಿಗಳ ತಮ್ಮ ವ್ಯಾಪ್ತಿಯಲ್ಲಿನ ಅರ್ಹ ವ್ಮತದಾರರನ್ನು ಗುರುತಿಸಿ ನೋಂದಣಿ ಮಾಡಿಸುವಲ್ಲಿ ಮುತುವರ್ಜಿ ವಹಿಸಬೇಕು ಮತ್ತು ಈ ಬಗ್ಗೆ ವ್ಯಾಪಕ ಪ್ರಚಾರ ನಡೆಸಿ ಅಚಿತಹ ಅರ್ಹರಿಂದ ನಮೂನೆ 19ರಲ್ಲಿ ನೋಂದಣಿಗಾಗಿ ಅರ್ಜಿ ಪಡೆದು ಸಂಬಂಧಪಟ್ಟ ಸಹಾಯಕ ಮತದಾನ ನೋಂದಣಾಧಿಕಾರಿಗಳಿಗೆ ಸಲ್ಲಿಸಬೇಕು ಎಂದು ಸಿಇಓ ಅವರು ಸೂಚನೆ ನೀಡಿದರು.

ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಬಯಸುವ ಪ್ರತಿಯೊಬ್ಬರು ಅರ್ಜಿ ನಮೂನೆ 19 ನ್ನು ಭರ್ತಿಮಾಡಿ ಅದರೊಂದಿಗೆ ಶೈಕ್ಷಣಿಕ ಸಂಸ್ಥೆಗಳಲ್ಲಿ 1ನೇ ನವೆಂಬರ್ 2025ಕ್ಕೆ ಮೊದಲು 6 ವರ್ಷಗಳ ಅವಧಿಯಲ್ಲಿ ಒಟ್ಟು ಕನಿಷ್ಟ 3 ವರ್ಷ ಭೋದನಾ ವೃತಿಯಲ್ಲಿ ನಿರತವಾಗಿರುವ ಬಗ್ಗೆ ಶೈಕ್ಷಣಿಕ ಸಂಸ್ಥೆಗಳಿಂದ ಅನುಬಂಧ–2 ರಲ್ಲಿ ಸಂಬಳ ಬಟವಾಡೆ ಅಧಿಕಾರಿಯಿಂದ ಪ್ರಮಾಣ ಪತ್ರ ಸಲ್ಲಿಸಬೇಕು. ಅರ್ಜಿದಾರರು ನಮೂನೆ–19ರ ಅರ್ಜಿಯೊಂದಿಗೆ ಆಧಾರ ಕಾರ್ಡ್, ಚುನಾವಣಾ ಗುರುತಿನ ಚೀಟಿ ಹಾಗೂ ಬೀಳಿ ಬಣ್ಣದ ಹಿನ್ನೆಲೆ ಹೊಂದಿದ 2 ಪಾಸ್‌ಪೋರ್ಟ ಅಳತೆಯ ಭಾವಚಿತ್ರಗಳನ್ನು ಸಲ್ಲಿಸಬೇಕು ಎಂದು ಸಿಇಓ ಅವರು ತಿಳಿಸಿದರು.

ಖಡಿಪಿಐ, ಡಿಡಿಪಿಯುಗೆ ಸೂಚನೆ: ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರ ನೋಂದಣಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಜಾಗೃತರಾಗಿ ಕೆಲಸ ಮಾಡಬೇಕು. ವ್ಯಾಪಕ ಪ್ರಚಾರಕ್ಕೆ ಕ್ರಮವಹಿಸಬೇಕು ಎಂದು ಇದೆ ವೇಳೆ ಸಿಇಓ ಅವರು ಡಿಡಿಪಿಐ ಮತ್ತು ಡಿಡಿಪಿಯುಗೆ ಸೂಚನೆ ನೀಡಿದರು.

ಮತದಾರರ ಮಿಂಚಿನ ನೋಂದಣಿ: ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣಾಧಿಕಾರಿ ಹಾಗೂ ಮತದಾರರ ನೋಂದಣಾಧಿಕಾರಿಗಳು ಆಗಿರುವ ಕುಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ ಅವರು ಶಿಕ್ಷಕರ ಕ್ಷೇತ್ರದ ಮತದಾರ ನೋಂದಣಿ ಪ್ರಕ್ರಿಯೆಯನ್ನು ಎಲ್ಲಾ ಜಿಲ್ಲೆಗಳಲ್ಲಿ ಚುರುಕಾಗಿ ನಡೆಸಲು ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದಾರೆ. ಹೀಗಾಗಿ ಈ ಕಾರ್ಯಕ್ಕೆ ನಿಯೋಜನೆಗೊಂಡ ಅಧಿಕಾರಿಗಳು ಈ ಕಾರ್ಯಕ್ಕೆ ಮೊದಲಾದ್ಯತೆ ನೀಡಬೇಕು. ರಾಯಚೂರು ಜಿಲ್ಲೆಯು ಉತ್ತಮ ಸ್ಥಾನ ಕಾಯ್ದುಕೊಳ್ಳವು ಹಾಗೆ ಪ್ರತಿದಿನ ಅರ್ಹ ಶಿಕ್ಷಕರ ಕ್ಷೇತ್ರದ ಮತದಾರ ನೋಂದಣಿ ಪ್ರಕ್ರಿಯೆಯು ಬಿರುಸಾಗಿ ನಡೆಯಬೇಕು. ಈ ನಿಟ್ಟಿನಲ್ಲಿ ಅಕ್ಟೋಬರ್ 27, 30 ಹಾಗೂ ನವೆಂಬರ್ 3ರಂದು ಮತದಾರರ ಮಿಂಚಿನ ನೋಂದಣಿ**(2ನೇಪುಟಕ್ಕೆ..)**

## ವಿದ್ಯಾರ್ಥಿಗಳು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗಿಯಾಗಲಿ

ಯುವ ಮಾರ್ಗ ಸುದ್ದಿ

**ರಾಯಚೂರು,ಅ.18–**ವಿದ್ಯಾರ್ಥಿಗಳು ಓದಿನ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಇದರಿಂದಾಗಿ ವ್ಯಕ್ತಿತ್ವ ವಿಸಕನಕ್ಕೆ ಸಹಕಾರಿಯಾಗಲಿದೆ ಎಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಭಜಂತ್ರಿ ಅವರು ಹೇಳಿದರು.

ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆಡಿಟೋರಿಯಂನಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರು ಯುವ ಕೇಂದ್ರ ಹಾಗೂ ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಅಕ್ಟೋಬರ್ 17ರಂದು ಆಯೋಜಿಸಿದ್ದ 2025–26ನೇ ಸಾಲಿನ ಜಿಲ್ಲಾಮಟ್ಟದ ಯುವಜನೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.




ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಯುವಜನಾಂಗ ಭಾಗವಹಿಸುವಿಕೆಯು ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿದೆ. ಮೊಬೈಲ್ ಬಳಕೆ ಮತ್ತು ಅನಗತ್ಯ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಕಳೆದು **(2ನೇಪುಟಕ್ಕೆ..)**

## ಮಾವಿನಕೆರೆಯ ರಸ್ತೆಯಲ್ಲಿ ರೇಸಿಂಗ್ ಪೈಪ್‌ಲೈನ್ ಜೋಡಣೆ ಕಾಮಗಾರಿಗೆ ಚಾಲನೆ

ಯುವ ಮಾರ್ಗ ಸುದ್ದಿ

**ರಾಯಚೂರು,ಅ.18–** ನಗರದ ಮಾವಿನಕೆರೆಯ ರಸ್ತೆಯಲ್ಲಿ ಸುಮಾರು 39.00 ಲಕ್ಷ ರೂ.ಗಳ ವೆಚ್ಚದಲ್ಲಿ ರೇಸಿಂಗ್ ಪೈಪ್‌ಲೈನ್ ಜೋಡಣೆ ಕಾಮಗಾರಿಗೆ ರಾಯಚೂರಿನ ಮಹಾಪೌರರಾದ ನರಸಮ್ಮ ನರಸಿಂಹಲು ಮಾಡಿಗಿರಿ ಅವರು ಶನಿವಾರ ಚಾಲನೆ ನೀಡಿದರು.



ಈ ಸಂದರ್ಭಲ್ಲಿ ಹಿರಿಯ ಸದಸ್ಯರಾದ ಜಯಣ್ಣ ಅವರು ಮಾತನಾಡಿ, ಸುಪ್ರಸಿದ್ಧ ಇತಿಹಾಸವುಳ್ಳ ಮಾವಿನಕೆರೆ ಅಭಿವೃದ್ಧಿಯ ಮುಂದುವರೆದ ಭಾಗವಾಗಿ ರಾಂಪುರ್ ಜಲಾಶಯದಿಂದ ಗಂಗಾ ನಿವಾಸದವರೆಗೆ ಹೊಸ ಮತ್ತು ಉತ್ತಮ ಗುಣಮಟ್ಟದ ಪೈಪ್‌ಲೈನ್ ಅಳವಡಿಸಲಾಗುತ್ತದೆ. ಇಲ್ಲಿನ ಹಳೆಯ ಪೈಪ್‌ಲೈನ್ ಪದೇಪದೆ ಲಿಕೇಜ್ ಮತ್ತು ದುರಸ್ತಿ ಬರುತ್ತಿತ್ತು. ಇದು ಅಧ್ಯಕ್ಷರು ಮತ್ತು ಸದಸ್ಯರ ಗಮನಕ್ಕೆ ಬಂದಿದ್ದರಿಂದಾಗಿ ಹೊಸ ಪೈಪ್‌ಲೈನ್ ಜೋಡಣೆ ಕಾಮಗಾರಿಗೆ ಪೂಜೆ ನೆರವೇರಿಸಲಾಗಿದೆ. ಈ ಭಾಗದ ಜನರಿಗೆ ನೀರಿನ ಸಮಸ್ಯೆಯಾಗದ ನಿಟ್ಟಿನಲ್ಲಿ ಕಾಮಗಾರಿಯನ್ನು ಬೇಗನೇ ಕೈಗೆತ್ತಿಕೊಂಡು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು ಎಂದು ಅವರು ಸ್ಥಳದಲ್ಲಿದ್ದ ಅಭಿಯಂತರರಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಮುಖಂಡರಾದ ನರಸಿಂಹಲು ಮಾಡಿಗಿರಿ, ಅಬ್ದುಲ್ ವಹೀದ್, ಅಭಿಯಂತರಾದ ಅಲ್ಲಾವುದ್ದಿನ್ ಹಾಗೂ ಸಿಬ್ಬಂದಿ ಹಾಗೂ ಇನ್ನಿತರರು ಇದ್ದರು.

## ಅರೋಲಿ ಸಾರ್ವಜನಿಕ ಗ್ರಂಥಾಲಯದಲ್ಲಿ ಅವ್ಯವಸ್ಥೆ : ಗ್ರಂಥಪಾಲಕರ ವಜಾಕ್ಕೆ ಆಗ್ರಹ

ಯುವ ಮಾರ್ಗ ಸುದ್ದಿ

**ಮಾನ್ವಿ,ಅ.18–** ತಾಲ್ಲೂಕಿನ ಅರೋಲಿ ಗ್ರಾಮದ ಸಾರ್ವಜನಿಕ ಗ್ರಂಥಾಲಯದಲ್ಲಿ ಗ್ರಂಥಪಾಲಕರಾದ ಪರಶುರಾಮ ಅವರು ಕರ್ತವ್ಯ ನಿರ್ಲಕ್ಷ್ಯ ತೋರುತ್ತಿದ್ದು, ಗ್ರಂಥಾಲಯವು ಸಂಪೂರ್ಣ ಅವ್ಯವಸ್ಥೆಯ ಗೂಡಾಗಿದೆ ಎಂದು ಆರೋಪಿಸಿ 'ಸ್ವಾಮಿ ವಿವೇಕಾನಂದ ಯುವಶಕ್ತಿ ಯುವಕ ಸಂಘ ಆರೋಪಿಸಿದೆ.

ಗ್ರಂಥಪಾಲಕರು ಸರಿಯಾದ ಸಮಯಕ್ಕೆ ಗ್ರಂಥಾಲಯವನ್ನು ತೆರೆಯದಿರುವುದು ಮತ್ತು ಕರ್ತವ್ಯ ನಿರ್ವಹಿಸದಿರುವುದು ಓದುಗರಿಗೆ ತೊಂದರೆಯಾಗಿದೆ ಎಂದು ಸಂಘಟನೆ ದೂರಿದೆ.ಗ್ರಂಥಪಾಲಕರ ಅವರು ಪ್ರತಿದಿನ ಗ್ರಾಮ ಪಂಚಾಯಿತಿ ಕಚೇರಿಗೆ ಬೆಳಿಗ್ಗೆ 11 ಅಥವಾ 12 ಗಂಟೆಗೆ ಬಂದು ಬಯೋಮೆಟ್ರಿಕ್ ಹಾಕಿ, ಗ್ರಂಥಾಲಯದಲ್ಲಿ ಒಂದೆರಡು ತಾಸು ಕುಳಿತು, ಸೆಲ್ಫಿ ಜಿಪಿಎಸ್ ತೆಗೆದುಕೊಂಡು ರಾಯ ಚೂರಿಗೆ ತೆರಳುತ್ತಾರೆ ಎಂದು ಹೇಳಿದೆ. ಅಲ್ಲದೆ, 2023ರಿಂದ ಓದುಗರ ಸಹಿ ಪುಸ್ತಕವನ್ನೂ ನಿರ್ವಹಣೆ ಮಾಡಿಲ್ಲ, ಮತ್ತು ಹಿಂದೆ ಈ ಪುಸ್ತಕದಲ್ಲಿ ತಮ್ಮ ಸಹೋದರರ ಹೆಸರುಗಳು ಹಾಗೂ ನಕಲಿ ಓದುಗರ ಸಹಿ ಸಂಗ್ರಹಿಸಿದ್ದರು ಎಂದು ಸಂಘಟನೆ ಆರೋಪಿಸಿದೆ. ಕೆಲವು ತಿಂಗಳುಗಳ ಹಿಂದೆ ಗ್ರಂಥಾಲಯವನ್ನು ರಾತ್ರಿಯ ಸಮಯದಲ್ಲಿ ಖಾಸಗಿ ವ್ಯಕ್ತಿಗಳಿಗೆ ಮಲಗಲು ನೀಡಿ, ಸುತ್ತಮುತ್ತಲಿನ ನಿವಾಸಿಗಳಿಗೆ ತೊಂದರೆ ಉಂಟು ಮಾಡಿದ್ದರು, ಸ್ಥಳೀಯರ ವಿರೋಧದ ನಂತರ ಇದನ್ನು ನಿಲ್ಲಿಸಲಾಗಿದೆ ಎನ್ನಲಾಗಿದೆ.

ಸಂಘಟನೆಯು ಈ ಹಿಂದೆ ಮೌಖಿಕವಾಗಿ ಮತ್ತು ಜಿಲ್ಲಾ ಪಂಚಾಯತ್ ಕುಂದುಕೊರತೆ ವಿಭಾಗಕ್ಕೆ ದೂರು ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಬಡತನದ ಹಿನ್ನೆಲೆಯುಳ್ಳ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಾಗಿ ಗ್ರಾಮದಲ್ಲಿ ಗ್ರಂಥಾಲಯ ಇದ್ದರೂ ಸಹ, ಬೇರೆ ನಗರಗಳಿಗೆ ಹೋಗಿ ಪ್ರತಿ ತಿಂಗಳು 500 ರಿಂದ 700 ರೂ. ನೀಡಿ ಖಾಸಗಿ ಗ್ರಂಥಾಲಯಗಳನ್ನು ಆಶ್ರಯಿಸುವ ಪರಿಸ್ಥಿತಿ ಎದುರಾಗಿದೆ. ಆದ್ದರಿಂದ, ಹಾಲಿ ಇರುವ ಗ್ರಂಥಪಾಲಕರನ್ನು ಕೆಲಸದಿಂದ ವಜಾ ಮಾಡಿ, ಗ್ರಾಮದಲ್ಲಿ ಸುಸಜ್ಜಿತ ಗ್ರಂಥಾಲಯವನ್ನು ನಿರ್ಮಾಣ ಮಾಡಿ, ಉತ್ತಮ ಗ್ರಂಥಪಾಲಕರನ್ನು ನೇಮಕ ಮಾಡಿ ಕೊಡಬೇಕು ಎಂದು ಸ್ವಾಮಿ ವಿವೇಕಾನಂದ ಯುವಶಕ್ತಿ ಯುವಕ ಸಂಘವು ತಾಲೂಕ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದೆ.

ಅವ್ಯವಸ್ಥೆ: ಗ್ರಂಥಾಲಯದಲ್ಲಿ ಓದಲು ದಿನಪತ್ರಿಕೆಗಳು, ಮಾಸಪತ್ರಿಕೆಗಳು, ಕುಳಿತುಕೊಳ್ಳಲು ಟೇಬಲ್ ವ್ಯವಸ್ಥೆ, ಕುಡಿಯುವ ನೀರು ಮತ್ತು ಶೌಚಾಲಯದ ವ್ಯವಸ್ಥೆಗಳೆಲ್ಲವೂ ಇಲ್ಲವಾಗಿದೆ. ಕಳೆದ 10 ವರ್ಷಗಳಿಂದ ಗ್ರಂಥಾಲಯಕ್ಕೆ ಯಾವುದೇ ಹೊಸ ಪುಸ್ತಕಗಳು ಬಂದಿಲ್ಲ, ಬದಲಿಗೆ 2014ರ ಹಳೆಯ ಮಾಸಪತ್ರಿಕೆಗಳನ್ನೇ ಇಲ್ಲಿಯವರೆಗೂ ಇಡಲಾಗಿದೆ. ಕಥೆ ಮತ್ತು ಕಾದಂಬರಿಗಳ ಪುಸ್ತಕಗಳನ್ನು ಹೊರತುಪಡಿಸಿದರೆ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತವಾಗುವಂತಹ ಯಾವುದೇ ನಿರ್ದಿಷ್ಟ ಲೇಖಕರ ಪುಸ್ತಕಗಳು ಒಂದೂ ಲಭ್ಯವಿಲ್ಲ. ಗ್ರಂಥಾಲಯದಲ್ಲಿ ಕಂಪ್ಯೂಟರ್ ಇದ್ದರೂ ಸಹ ನೆಟ್‌ವರ್ಕ್ ವ್ಯವಸ್ಥೆ ಇಲ್ಲದ ಕಾರಣ ಇದುವರೆಗೆ ಅದನ್ನು ಬಳಕೆ ಮಾಡಿಲ್ಲ. ಗ್ರಂಥಾಲಯದಲ್ಲಿ ಸುಮಾರು ಆರುರಿಂದ ಎಂಟು ಚೀಲಗಳಲ್ಲಿ ಕಥೆ–ಕಾದಂಬರಿ ಪುಸ್ತಕಗಳನ್ನು ತೆರೆಯದೆ ಹಾಗೆಯೇ ಇಡಲಾಗಿದ್ದು, ಅವು ಗೆದ್ದಲು ಹುಳು ಹಿಡಿಯುವ ಸ್ಥಿತಿಯಲ್ಲಿವೆ ಎಂದು ಓದುಗರು ಬೇಸರ ವ್ಯಕ್ತಿಪಡಿಸಿದ್ದಾರೆ.




ಅರೋಲಿ ಗ್ರಾಮದಲ್ಲಿರುವ ಗ್ರಾಮ ಪಂಚಾಯತ ಗ್ರಂಥಾಲಯ

ಯುವ ಮಾರ್ಗ

ಭಾನುವಾರ: 19–10–2025

## ಮೊದಲನೇಯ ಪುಟದಿಂದ

# ಅರ್ಹ ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿ ಮಾಡಿಸಲಿ: ಈಶ್ವರ್ ಕಾಂದೂ

ಕಾರ್ಯಾಚರಣೆಗೆ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಸಿಇಓ ಅವರು ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜಾರಿ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕೆ.ಡಿ.ಬಡಿಗೇರ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಸೋಮಶೇಖರಪ್ಪ ಹೊಕ್ರಾಣಿ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಉಪ ಕುಲಸಚಿವರಾದ ಡಾ.ಜಿ.ಎಸ್.ಬಿರಾದಾರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಸಹಾಯಕ ಕುಲಸಚವರಾದ ವಿರುಪಣ್ಣ ಕೆ.ಎಂ., ಸ್ವೀಪ್ ಸಮಿತಿಯ ನೋಡಲ್ ಅಧಿಕಾರಿಗಳಾದ ಡಾ.ವಾಲ್ಮೀಕಿ ಬಿ ಎಂ., ಇಸಿಓ ರಾಘವೇಂದ್ರ, ಮತದಾರ ಸಾಕ್ಷರತಾ ಕ್ಲಬ್‌ನ ನೋಡಲ್ ಅಧಿಕಾರಿ ಡಾ.ದಂಡಪ್ಪ ಬಿರಾದಾರ, ವಾರ್ತಾ ಇಲಾಖೆಯ ವಾರ್ತಾ ಸಹಾಯಕರಾದ ಗವಿಸಿದ್ದಪ್ಪ ಹೊಸಮನಿ, ವಿವಿಧ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಇನ್ನೀತರರು ಇದ್ದರು.

# ವಿದ್ಯಾರ್ಥಿಗಳು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗಿಯಾಗಲಿ

ಹೋಗಬಾರದು. ಓದಿನ ಜೊತೆಗೆ ವಿದ್ಯಾರ್ಥಿ ಯುವಜನರು ವಿವಿಧ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಲ್ಲಿ ನಾಯಕತ್ವ ಗುಣ ಸೇರಿದಂತೆ ಸಮಾಜಮುಖಿಯಾಗಿ ಬೆಳೆಯಲು ಸಾಧ್ಯವಾಗುತ್ತದೆ ಎಂದು ಅವರು ಸಲಹೆ ಮಾಡಿದರು.

ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವೀರೇಶ ನಾಯಕ ಅವರು ಮಾತನಾಡಿ, ಸಂಸ್ಕೃತಿ ಉಳಿಸಿ, ಬೆಳೆಸುವಲ್ಲಿ ಯುವ ಜನತೆಯ ಪಾತ್ರ ಬಹುಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಯುವ ಜನರು ನಾಟಕ, ನೃತ್ಯ, ಜನಪದ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆ ಪ್ರದರ್ಶಿಸಬೇಕು ಎಂದು ತಿಳಿಸಿದರು.

ಇಲ್ಲಿ ಪ್ರಥಮ ಸ್ಥಾನ ಪಡೆದ ಸ್ಪರ್ಧಿಗಳು ರಾಜ್ಯಮಟ್ಟದ ಯುವಜನೋತ್ಸವಕ್ಕೆ ಆಯ್ಕೆಯಾಗುತ್ತಾರೆ. ಯಾದಗಿರಿ ಜಿಲ್ಲೆಯಲ್ಲಿ ರಾಜ್ಯಮಟ್ಟದ ಸ್ಪರ್ಧೆ ನಡೆಯಲಿದ್ದು, ಅಲ್ಲಿ ವಿಜೇತರಾದವರು ರಾಷ್ಟ್ರೀಯ ಮಟ್ಟಕ್ಕೆ ಅರ್ಹರಾಗುತ್ತಾರೆ ಎಂದು ವೀರೇಶ ನಾಯಕ ಅವರು ತಿಳಿಸಿದರು.

ಯುವಜನೋತ್ಸವ ಕಾರ್ಯಕ್ರಮದಲ್ಲಿ ಸುಮಾರು 180ಕ್ಕೂ ಹೆಚ್ಚು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಸ್ಪರ್ಧಿಯಾಗಿ ಭಾಗವಹಿಸಿದ್ದರು. ಜನಪದ ಗೀತೆ, ಜನಪದ ನೃತ್ಯ, ಸ್ಟೋರಿ ರೈಟಿಂಗ್, ಕವಿತೆ ಬರೆಯುವುದು, ಘೋಷಣೆ ಸೇರಿದಂತೆ ಹಲವು ಸ್ಪರ್ಧೆಗಳನ್ನ ಆಯೋಜಿಸಿ ವಿದ್ಯಾರ್ಥಿಗಳ ಸುಪ್ತ ಪ್ರತಿಭೆಯ ಅನಾವರಣಕ್ಕೆ ವೇದಿಕೆ ಒದಗಿಸಲಾಯಿತು.

ಇದೇ ಸಂದರ್ಭದಲ್ಲಿ ಕೃಷಿ ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಅಧಿಕಾರಿಗಳು ಸೇರಿದಂತೆ ತೀರ್ಪುಗಾರರು ಹಾಗೂ ವಿದ್ಯಾರ್ಥಿಗಳು ಇದ್ದರು.

# ವಿಶ್ವ ಮಾನಸಿಕ ಆರೋಗ್ಯ ದಿನದ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮ

ಅವಗುಣಗಳ ಕಡೆ ಮನಸ್ಸುನ್ನು ಹರಿಯಬಿಡದೆ ಉತ್ತಮವಾದ ಜೀವನವನ್ನು ರೂಪಿಸಿಕೊಳ್ಳುವುದು ಮುಖ್ಯವಾಗಿದೆ.ದುಷ್ಚಟಗಳಿಗೆ ಬಲಿಯಾದವರು ಅನೇಕ ಅಪರಾಧಿಕ ಚಟುವಟಿಕೆಗಳನ್ನು ಮಾಡುವುದಕ್ಕೆ ಪ್ರೇರಣೆಯಾಗುವುದರಿಂದ ದುಷ್ಚಟಗಳಿಂದ ಮುಕ್ತರಾಗಿ ಸ್ವಸ್ತ ವಾದ ಮನಸ್ಸನ್ನು ಹೊಂದಿ ಒತ್ತಡ ಮುಕ್ತವಾದ ಜೀವನವನ್ನು ತಮ್ಮದಾಗಿಸಿಕೊಳ್ಳುವಂತೆ ಕರೆ ನೀಡಿದರು.

ರಾಯಚೂರು ರಿಮ್ಸನ ಮಾನಸಿಕ ಆರೋಗ್ಯ ತಜ್ಞರಾದ ಮನೋಹರ ಪತ್ತರ ಮಾತನಾಡಿ ಪ್ರತಿ ವರ್ಷ ಅ.10ರಂದು ವಿಶ್ವದಾದ್ಯಂತ ಮಾನಸಿಕ ಆರೋಗ್ಯದ ಬಗ್ಗೆ ಇರುವ ಹಲವು ಮೂಡ ನಂಬಿಕೆಗಳನ್ನು ಹೊಗಲಾಡಿಸುವುದು ಹಾಗೂ ಉತ್ತಮ ಆರೋಗ್ಯಕ್ಕೆ ಉತ್ತಮ ಮಾನಸಿಕ ಆರೋಗ್ಯ ಹೊಂದುವುದು ಕೂಡ ಮುಖ್ಯವಾಗಿರುತ್ತದೆ ಎಂದು ತಿಳಿಸುವ ಉದ್ದೇಶದಿಂದ ವಿಶ್ವ ಮಾನಸಿಕ ಆರೋಗ್ಯ ದಿನವನ್ನು ಆಚರಿಸಲಾಗುತ್ತದೆ. ಮಾನಸಿಕ ಕಾಯಿಲೆಗಳನ್ನು ಪ್ರಾರಂಭದಲ್ಲಿಯೇ ಗುರುತಿಸಿ ಅಗತ್ಯ ಚಿಕಿತ್ಸೆಯನ್ನು ನೀಡುವುದರಿಂದ ಹಲವು ಮಾನಸಿಕ ಕಾಯಿಲೆಗಳಿಗೆ ಪರಿಹಾರ ಕಂಡು ಕೊಳ್ಳಬಹುದಾಗಿದೆ. ಮಹಿಳೆಯರಲ್ಲಿ ಹಾರ್ಮೋನ್‌ಗಳ ಬದಲಾವಣೆಯಿಂದ ಹಾಗೂ ಪಿತೃತ್ವಧಿಕಾರದ ಇಂದಿನ ಕುಟುಂಬ ಪದ್ಧತಿಯಿಂದ ಹಾಗೂ ಒತ್ತಡ ಜೀವನದಿಂದಾಗಿ ಮಹಿಳೆಯರಲ್ಲಿ ಇಂದು ಅನೇಕ ಮಾನಸಿಕ ಆರೋಗ್ಯ ಸಮಸ್ಯೆಗಳನ್ನು ಕಾಣಬಹುದಾಗಿದೆ. ಮಕ್ಕಳಲ್ಲಿ ಬೆಳವಣಿಗೆ ಹಣತದಲ್ಲಿ ಕಾಣುವ ಅನೇಕ ಬೆಳವಣಿಗೆಗಳನ್ನು ಗುರುತಿಸಿ ಚಿಕಿತ್ಸೆ ನೀಡುವುದರಿಂದ ಉತ್ತಮ ಬೆಳವಣಿಗೆ ಕಾಣುವುದಕ್ಕೆ ಸಾಧ್ಯವಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಿವಿಲ್ ನ್ಯಾಯಾಧೀಶರಾದ ಆನಂದ ಹೆಚ್.ಕೊಣ್ಣೂರು, ತಾ.ಆರೋಗ್ಯಧೀಕಾರಿ ಡಾ.ಶರಣಬಸವರಾಜ, ವಕೀಲರ ಸಂಘದ ತಾ.ಅಧ್ಯಕ್ಷರಾದ ರವಿಕೂಮಾರ ಪಾಟೀಲ್,ಉಪಾಧ್ಯಕ್ಷರಾದ ಕೊರವಯ್ಯನಾಯಕ, ದತ್ತಾತ್ರೇಯ ಹಿರೇಕೊಟ್ನೆಕಲ್ ,ಮಲ್ಲೇಶ ಮಾಚನೂರು, ಹಿರಿಯ ವಕೀಲರಾದ ಗುಮ್ಮ ಬಸವರಾಜ,ದೇಸಾಯಿ ದೊತ್ತರ ಬಂಡಿ, ಯಲ್ಲಪ್ಪ ಬಾದರದಿನ್ನಿ ಆರೋಗ್ಯ ಶಿಕ್ಷಣಾಧೀಕಾರಿ ಬಾಬು ಚಿನ್ನು ಸೇರಿದಂತೆ ಆರೋಗ್ಯ ಇಲಾಖೆ ಸಿಬ್ಬಂದಿಗಳು ಆಶಾಕಾರ್ಯಕರ್ತರು, ಸೇರಿದಂತೆ ಇನ್ನಿತರರು ಇದ್ದರು.

# ಸಮಸ್ಯೆ ತ್ವರಿತ ಪರಿಹಾರಕ್ಕೆ ಕ್ವಾಂಟಮ್ ಕಂಪ್ಯೂಟಿಂಗ್ ಸಹಕಾರಿ




**ಬೀದರ್,ಅ.18–**ಕ್ವಾಂಟಮ್ ಕಂಪ್ಯೂಟಿಂಗ್ ಇತರ ಕಂಪ್ಯೂಟರ್ ಗಳಿಗಿಂತ ಕೆಲ ಸಮಸ್ಯೆಗಳ ತ್ವರಿತ ಪರಿಹಾರಕ್ಕೆ ಸಹಕಾರಿಯಾಗಿದೆ ಎಂದು ಗುಲಬರ್ಗಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಬಿ.ಜಿ. ಮೂಲಿಮನಿ ಹೇಳಿದರು.

ಅಂತರರಾಷ್ಟ್ರೀಯ ಕ್ವಾಂಟಮ್ ವಿಜ್ಞಾನ ಮತ್ತು ತಂತ್ರಜ್ಞಾನ ವರ್ಷಾಚರಣೆ ನಿಮಿತ್ತ ನಗರದ ಕರ್ನಾಟಕ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಕಾಲೇಜಿನಲ್ಲಿ ಆಯೋಜಿಸಿದ್ದ ಕ್ವಾಂಟಮ್ ಕಂಪ್ಯೂಟಿಂಗ್ ಕುರಿತ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಕ್ವಾಂಟಮ್ ಕಂಪ್ಯೂಟಿಂಗ್ ಎಂಬುದು ಕಂಪ್ಯೂಟರ್ ವಿಜ್ಞಾನ, ಭೌತಶಾಸ್ತ್ರ ಹಾಗೂ ಗಣಿತಶಾಸ್ತ್ರದ ಅಂಶಗಳನ್ನು ಒಳಗೊಂಡ ಬಹುಶಿಸ್ತಿನ ಕ್ಷೇತ್ರವಾಗಿದೆ ಎಂದು ತಿಳಿಸಿದರು.

ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಬಿ.ಜಿ. ಶೆಟಕಾರ್ ಮಾತನಾಡಿ, ವಿಜ್ಞಾನಕ್ಕೆ ಸಂಬಂಧಿಸಿದ ಕಾರ್ಯಾಗಾರಗಳು ಹೊಸ ಆಲೋಚನೆ ಹಾಗೂ ಹೊಸ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆ ನೀಡುತ್ತವೆ ಎಂದು ಹೇಳಿದರು.

ಬೆಂಗಳೂರಿನ ಜೆಎನ್‌ಸಿಎಎಸ್‌ಆರ್‌ನ ಪ್ರೊ. ವಿದ್ಯಾಧೀರಾಜ್ ಅವರು ಪ್ರಸಕ್ತ ಸಾಲಿನಲ್ಲಿ ಭೌತಶಾಸ್ತ್ರ ವಿಭಾಗದಲ್ಲಿ ನೋಬೆಲ್ ಪ್ರಶಸ್ತಿ ಪಡೆದವರ ಸಂಶೋಧನೆ ಕುರಿತು ಮಾಹಿತಿ ನೀಡಿದರು.

ಕಲಬುರಗಿಯ ಎಸ್.ಬಿ. ಕಾಲೇಜಿನ ನಿವೃತ್ತ ಪ್ರಾಚಾರ್ಯ ಡಾ. ಎಂ.ಎಸ್. ಜೋಗದ್, ಪ್ರಾಚಾರ್ಯ ಡಾ. ಮಲ್ಲಿಕಾರ್ಜುನ ಹಂಗರಗಿ ಮಾತನಾಡಿದರು.

ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಸತೀಶ್ ಪಾಟೀಲ, ಆಡಳಿತ ಮಂಡಳಿ ಸದಸ್ಯರಾದ ಚಂದ್ರಕಾಂತ ಶೆಟಕಾರ್, ಸಿದ್ಧರಾಜ ಪಾಟೀಲ, ಉಪ ಪ್ರಾಚಾರ್ಯ ಸೋಮನಾಥ ಬಿರಾದಾರ, ಸಿಬ್ಬಂದಿ ಕಾರ್ಯದರ್ಶಿ ಶ್ರೀಕಾಂತ ದೊಡ್ಡಮನಿ, ಡಾ. ಸೋಮನಾಥ ಮುದ್ದಾ, ಡಾ. ಜೀವನ ಕುಮಾರ, ಡಾ. ಸೋಮೇಶ್ವರಿ ಮುದ್ದಾ, ಅಶೋಕ ಬಾಜೋಳಗೆಕರ್, ದೀಪಿಕಾ ರೆಡ್ಡಿ, ಸೌಂದರ್ಯ ಮತ್ತಿತರರು ಇದ್ದರು. ರೇಣುಕಾ ಸರಡಗಿ ನಿರೂಪಿಸಿದರು. ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ವೀರೇಶ್ ಎಸ್. ವಂದಿಸಿದರು.

# ತುರ್ತು ಪರಿಸ್ಥಿತಿಯಲ್ಲಿ ವ್ಯಕ್ತಿಯ ಆರೋಗ್ಯ ಸುರಕ್ಷತೆಗೆ ಮನೋಸ್ಥೈರ್ಯ ಅಗತ್ಯ: ನ್ಯಾ.ಹೆಚ್ ಎ. ಸಾತ್ವೀಕ್ ಸಲಹೆ



ಯುವ ಮಾರ್ಗ ಸುದ್ದಿ

**ರಾಯಚೂರು,ಅ.18–** ಮಾನವೀಯ ತುರ್ತು ಪರಿಸ್ಥಿತಿಗಳಲ್ಲಿ ಪ್ರತಿಯೊಬ್ಬರ ಮಾನಸಿಕ ಆರೋಗ್ಯ ಕಾಪಾಡುವ ಹೊಣೆಗಾರಿಕೆ ಎಲ್ಲರದಾಗಿದ್ದು, ಈ ದಿಶೆಯಲ್ಲಿ ಅಕಾಲಿಕವಾಗಿ ಎದುರಾಗುವ ನೈಸರ್ಗಿಕ ವಿಪತ್ತು, ಮಾನವೀಯ ಸಂಕಷ್ಟಗಳು, ಸಾರ್ವಜನಿಕ ಆರೋಗ್ಯ ತುರ್ತು ಸನ್ನಿವೇಶಗಳಲ್ಲಿ ಬೆಂಬಲ ಆರೈಕೆಯನ್ನು ನಾವೆಲ್ಲರೂ ನೀಡೋಣ ಎಂದು ಗೌರವಾನ್ವಿತ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಹನುಮಂತ ಎ ಸಾತ್ವಿಕ್ ಅವರು ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ವಿಭಾಗ, ರೀಮ್ಸ್ ಸಂಯೋಗದೊಂದಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಅಕ್ಟೋಬರ್ 17ರಂದು ನಡೆದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ವರ್ಷಗಳಲ್ಲಿ ನೈಸರ್ಗಿಕ ವಿಪತ್ತುಗಳು, ಯುದ್ಧ, ಸಂಘರ್ಷಗಳು ಹಾಗೂ ಎಲ್ಲಡೆ ವ್ಯಾಪಕವಾಗಿ ಕಂಡುಬರುವ ಸಾಂಕ್ರಾಮಿಕ ರೋಗಗಳ ಸನ್ನಿವೇಶಗಳಲ್ಲಿ ಮಾನಸಿಕ ಸ್ಥೈರ್ಯ ನೀಡುವ ಕೆಲಸ ಮಾಡುವ ಹೊಣೆಗಾರಿಕೆ ಎಲ್ಲರದ್ದಾಗಿದೆ. ನಾವು ನಿರ್ಲಕ್ಷಿಸುವ ವಿಷಯಗಳಲ್ಲಿ ಮಾನಸಿಕ ಆರೋಗ್ಯವು ಒಂದಾಗಿದ್ದು, ಇವತ್ತು ಕಾನೂನಿನ ಮೂಲಕ ಅಂತಹ ವ್ಯಕ್ತಿಗಳಿಗೆ ಬೆಂಬಲ ನೀಡುವ ಕಾರ್ಯ ಮಾಡಲಾಗುತ್ತಿದ್ದು ಇದರ ಸದುಪಯೋಗ ಪಡೆಯಲು ಹೆಚ್ಚಿನ ಜಾಗೃತಿ ನೀಡಲು ಅವರು ಸಲಹೆ ಮಾಡಿದರು.

ಜಿಲ್ಲಾ ಮಾನಸಿಕ ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಡಾ.ನಂದಿತಾ ಎಮ್ ಎನ್ ಅವರು ಪ್ರಾಸ್ತಾವಿಕ ಮಾತನಾಡಿ, ಜಿಲ್ಲೆಯಾದ್ಯಂತ ಮಾನಸಿಕ ಆರೋಗ್ಯ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಪ್ರಾಥಾಮಿಕ ಆರೋಗ್ಯ ಕೇಂದ್ರಗಳ ಮಟ್ಟದಲ್ಲಿಯೇ ಮಾನಸಿಕ ಆರೋಗ್ಯ ಸೇವೆಗಳನ್ನು ಒದಗಿಸುತ್ತಿದ್ದೇವೆ. ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಇದನ್ನು ನಿಯಮಿತ ನಡೆಸುತ್ತಿದ್ದೇವೆ. ಮನೋಚೈತನ್ಯ ಕಾರ್ಯಕ್ರಮ ಮೂಲಕ ತಾಲೂಕಾ ಮಟ್ಟದ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಆಪ್ತಸಮಾಲೋಚನೆ, ಸಲಹೆ, ಚಿಕಿತ್ಸೆ ನೀಡುವ ಜೊತೆಗೆ ತುರ್ತು ಪರಿಸ್ಥಿತಿಗಳಿಗೆ ತಕ್ಕಂತೆ ತುರ್ತು ಮಾನಸಿಕ ಆರೈಕೆ ಯೋಜನೆಯ ಕುರಿತು ಶಾಲಾ–ಕಾಲೇಜುಗಳಲ್ಲಿ ಜೀವನ ಕೌಶಲ್ಯ ಶಿಕ್ಷಣ, ಒತ್ತಡ ನಿರ್ವಹಣಾ ತರಬೇತಿ ನೀಡಲಾಗುತ್ತಿದೆ. ಜೊತೆಗೆ ಪತ್ರಿಕಾ, ವಿದ್ಯುನ್ಮಾನ ಮಾಧ್ಯಮಗಳ ಮೂಲಕವು ಮಾಹಿತಿಯನ್ನು ಹಂಚಿಕೊಂಡು ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಮನೋರೋಗ ತಜ್ಞರಾದ ಡಾ.ಮನೋಹರ ಪತ್ತಾರ ಉಪನ್ಯಾಸ ನೀಡಿದರು. ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ ಗಣೇಶ್ ಅಧ್ಯಕ್ಷತೆ ವಹಿಸಿದ್ದರು. ರೀಮ್ಸ ಪ್ರಭಾರಿ ಡೀನ್ ಡಾ.ಅರವಿಂದ್ ಸಂಗಾವಿ, ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಡಾ.ಚಂದ್ರಶೇಖರಯ್ಯ ಸ್ವಾಮಿ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಡಾ.ಶಿವಕುಮಾರ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಮಹಮ್ಮದ್ ಶಾಕೀರ್, ಸೇರಿದಂತೆ ತಾಲೂಕು ಅರೋಗ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿಗಳು, ಆಡಳಿತ ವೈದ್ಯಾಧಿಕಾರಿಗಳು ಉಪಸ್ಥಿತರಿದ್ದರು. ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ ಸ್ವಾಗತಿಸಿ ವಂದಿಸಿದರು.

# ಫುಟ್ಬಾಲ್ : ಮಾನ್ವಿ ಬಾಲಕಿಯರ ಸರಕಾರಿ ಪ್ರೌಢ ಶಾಲೆ ವಿದ್ಯಾರ್ಥಿಗಳು ವಿಭಾಗ ಮಟ್ಟಕ್ಕೆ ಆಯ್ಕೆ



ಯುವ ಮಾರ್ಗ ಸುದ್ದಿ


**ಮಾನ್ವಿ,ಅ.18–** ಶಾಲಾ ಶಿಕ್ಷಣ ಇಲಾಖೆ ರಾಯಚೂರು ವತಿಯಿಂದ ನಗರದ ಲಯನ್ಸ್ ಪ್ರೌಢ ಶಾಲೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ 17 ವರ್ಷದ ಒಳಗಿನ ಬಾಲಕಿಯರ ವಿಭಾಗದ ಫುಟ್ ಬಾಲ್ ಕ್ರೀಡಾಕೂಟದಲ್ಲಿ ಮಾನ್ವಿ ಪಟ್ಟಣದ ಬಾಲಕಿಯ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿನಿಯರ ತಂಡ ರನ್ನರ್ ಅಪ್ ಸ್ಥಾನ ಪಡೆದುಕೊಂಡಿತು.

ಇದರ ಜೊತೆಗೆ ಬಾಲಕಿಯರ ಸರ್ಕಾರಿ ಪ್ರೌಢ ಶಾಲೆ ಶಾಲೆಯ ವಿದ್ಯಾರ್ಥಿ ನಿಯರಾದ ಜ್ಯೋತಿ, ಇಂದ್ರಜಾ, ಬಿಂದು, ಸಿಂಧು,ಶರೀಫಾ, ಶಾಂತಮ್ಮ, ಸವಿತಾ ಒಟ್ಟು ಏಳು ಕ್ರೀಡಾಪಟುಗಳು ಕಲಬುರ್ಗಿ ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ ಎಂದು ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು ತಿಳಿಸಿದರು.

ಆಯ್ಕೆಯಾದ ವಿದ್ಯಾರ್ಥಿಗಳಿಗೆ ಶಾಲಾ ಉಪ ಪ್ರಾಂಶುಪಾಲರಾದ ಸುಧಾಕರ ಸಂಜೀವ ,ಶಾಲಾ ಸಿಬ್ಬಂದಿ ವರ್ಗ ಹಾಗೂ ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷರು ಅಭಿನಂದಿಸಿದ್ದಾರೆ

# ರಾಯಚೂರು ನಗರದ ಮಂಗಳವಾರಪೇಟೆಯ 19ರ ಯುವಕ ಕಾಣೆ

ಯುವ ಮಾರ್ಗ ಸುದ್ದಿ



**ರಾಯಚೂರು,ಅ.18–** ಮನೆಯಿಂದ ಹೊರ ಹೋಗಿ ಬರುತ್ತೇನೆ ಎಂದು ಹೇಳಿ ದಿನಾಂಕ 14–10–2025 ರಂದು ಬೆಳಿಗ್ಗೆ ಹೇಳಿ ಹೊರಹೋದ ರಾಯಚೂರು ನಗರದ ಮಂಗಳವಾರಪೇಟೆಯ ಪರಕೋಟಾ ಮೊಹಮ್ಮದ್ ಶೋಯೆಬ್ ತಂದೆ ಮೊಹಮ್ಮದ್ ಪಾಷಾ (ವಯಸ್ಸು 19) ರಾತ್ರಿಯಾದರೂ ಮನೆಗೆ ಬಂದಿಲ್ಲ. ಹುಡುಕಾಡಲಾಗಿ ಪತ್ತೆಯಾಗಿಲ್ಲ ಎಂದು ಸದರ್ ಬಜಾರ್ ಪೊಲೀಸ್ ಠಾಣೆಯ ಗುನ್ನೆ ನಂ 97/2025 ಕಲಂ ಮನುಷ್ಯ ಕಾಣೆಯಡಿ ಪ್ರಕರಣ ದಾಖಲಾಗಿದೆ.

ಈತನು ಚಿಕನ್ ಅಂಗಡಿಯಲ್ಲಿ ಕೆಲಸ ಮಾಡುತ್ತಾನೆ. 5.6 ಅಡಿ ಎತ್ತರ, ಕಪ್ಪು ಕೂದಲಿನ ಬಣ್ಣ, ಕೆಂಪು ಮೈಬಣ್ಣ, ಸಾಧಾರಣ ಮೈಕಟ್ಟು, ಕ್ರೀಮ್ ಬಣ್ಣದ ಅರ್ಧ ತೋಳಿನ ಅಂಗಿ ಮತ್ತು ಬ್ರೌನ್ ಕಲರ್ ಫಾರ್ಮುಲಾ ಪ್ಯಾಂಟ್ ಧರಿಸಿದ್ದಾನೆ. ಕನ್ನಡ ಮತ್ತು ಹಿಂದಿ ಮಾತನಾಡುತ್ತಾನೆ.

ಈತನ ಬಗ್ಗೆ ಯಾವುದಾದರೂ ಉಪಯುಕ್ತ ಮಾಹಿತಿ ಸಿಕ್ಕಲ್ಲಿ ಸದರ್ ಬಜಾರ್ ಪೊಲೀಸ್ ಠಾಣೆ ರಾಯಚೂರು ದೂರವಾಣಿ ಸಂ: 08532–226148 ಅಥವಾ ಆರಕ್ಷಕ ನಿರೀಕ್ಷಕರು ಸದರ್ ಬಜಾರ್ ಪೊಲೀಸ್ ಠಾಣೆ ರಾಯಚೂರು ಮೊ.ನಂ. 9480803830 ವಿಳಾಸಕ್ಕೆ ಮಾಹಿತಿ ನೀಡಲು ಸದರ್ ಬಜಾರ್ ಪೊಲೀಸ್ ಠಾಣೆಯ ಆರಕ್ಷಕರ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಚಿತ್ತಾಪುರ ಖರ್ಗೆ ಕುಟುಂಬದ ರಿಪಬ್ಲಿಕ್ ಆಗಿದೆಯೇ: ಅಶೋಕ್ ಪ್ರಶ್ನೆ



**ಬೆಂಗಳೂರು.ಅ.18** ಚಿತ್ತಾಪುರ ಭಾರತದಲ್ಲಿದೆಯೋ ಅಥವಾ ಖರ್ಗೆ ಕುಟುಂಬದ ರಿಪಬ್ಲಿಕ್ ಆಗಿದೆಯೋ ಎಂದು ಪ್ರತಿಪಕ್ಷ ನಾಯಕ ಆರ್ ಅಶೋಕ್ ಪ್ರಶ್ನಿಸಿದ್ದಾರೆ.

ಚಿತ್ತಾಪುರದಲ್ಲಿ ನಾಳೆ ನಡೆಯಲಿರುವ ಆರ್ ಎಸ್‌ಎಸ್ ಪಥಸಂಚಲನಕ್ಕೆ ಪುರಸಭೆಯಿಂದ ಅನುಮತಿ ಪತ್ರ ಪಡೆಯಲಾಗಿದೆ.

ಬ್ಯಾನರ್, ಧ್ವಜ ಕಟ್ಟಲು ಪುರಸಭೆಗೆ ಜಾಹೀರಾತು ತೆರಿಗೆ ಕಟ್ಟಿ ರಸೀದಿ ಪಡೆಯಲಾಗಿದೆ ಇಷ್ಟಾದರೂ ರಾತ್ರೋ ರಾತ್ರಿ ಕೇಸರಿ ಬ್ಯಾನರ್, ಧ್ವಜಗಳನ್ನು ತೆರವುಗೊಳಿಸಿದ್ದೀರಲ್ಲ ಸಚಿವ ಪ್ರಿಯಾಂಕ್ ಖರ್ಗೆ ಅವರೇ, ತಾವೇನು ಚಿತ್ತಾಪುರದ ನಿಜಾಮು ಅಂದುಕೊಂಡಿದ್ದೀರೋ ಅಥವಾ ರಜಾಕರ್ ಅಂದುಕೊಂಡಿದ್ದೀರೋ? ಎಂದು ಕಿಡಿಕಾರಿದ್ದಾರೆ.

ಆರ್ ಎಸ್‌ಎಸ್ ಬಗ್ಗೆ ವಿಷ ಕಾರಿದರೆ ನಕಲಿ ಗಾಂಧಿಗಳನ್ನು ಮೆಚ್ಚಿಸಿ ಏನೋ ಆಗಿಬಿಡಬಹುದು, ಚಿತ್ತಾಪುರ ರಿಪಬ್ಲಿಕ್ ಮಾಡಿಕೊಂಡುಬಿಡಬಹುದು ಎಂಬ ಕನಸು ಕಾಣಬೇಡಿ. ಈ "ತುರ್ತು ಪರಿಸ್ಥಿತಿ" ಆಟ ಜಾಸ್ತಿ ದಿನ ನಡೆಯೋದಿಲ್ಲ. ಎಂದು ಎಚ್ಚರಿಕೆ ನೀಡಿದ್ದಾರೆ.

# ಆಳಂದ ಪಟ್ಟಣದ ಮೂಲಭೂತ ಸಮಸ್ಯೆಗಳ ನಿರ್ಲಕ್ಷ್ಯ: ಜನಸಾಮಾನ್ಯರ ಆಕ್ರೋಶ

**ಆಳಂದ:ಅ.18–** ಜನರ ದಿನನಿತ್ಯದ ಸಮಸ್ಯೆಗಳನ್ನು ಆಳುವವರು ಗಮನಿಸುತ್ತಿಲ್ಲ ಎಂಬ ಆಕ್ರೋಶ ಪಟ್ಟಣದ ಪ್ರಜೆಗಳಲ್ಲಿದೆ. ಸಂಘಟನೆಗಳು, ಪ್ರತಿಪಕ್ಷಗಳು, ಹಾಗೂ ಸಾಮಾಜಿಕ ಹೋರಾಟಗಾರರು ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವಲ್ಲಿ ವಿಫಲವಾಗಿದ್ದು, ಸಾರ್ವಜನಿಕರು ನರಕಾಯ ಜೀವನ ಕಳೆಯುವಂತಾಗಿದೆ.

**ರಸ್ತೆಯ ದುಸ್ಥಿತಿ, ಧೂಳಿನ ಕಾಟ:** ದರ್ಗಾ ಚೌಕದಿಂದ ಸಿದ್ಧಾರ್ಥ ಚೌಕ್ ವರೆಗೆ ಸುಮಾರು ಎರಡು ಕಿಲೋಮೀಟರ್ ಉದ್ದದ ಮುಖ್ಯ ರಸ್ತೆಯು ತೀರಾ ಹದಗೆಟ್ಟು ಧೂಳಿನಿಂದ ಕಂಗಾಲಾಗಿದೆ. ವಾಹನ ಸಂಚಾರ ತೆಗ್ಗು, ದೊಡ್ಡ ದೊಡ್ಡ ಗುಂಡಿಗಳು, ಮತ್ತು ನಿರಂತರ ಜಾಮಿನಿಂದ ಜನರ ಸಂಚಾರವೇ ಸಂಕಷ್ಟವಾಗಿದೆ. "ಈ ರಸ್ತೆ ಸರ್ಕಸ್ ಮಾಡಿದಂತಾಗಿದೆ" ಎಂದು ನಾಗರಿಕರು ವ್ಯಂಗ್ಯವಾಗಿ ಹೇಳುತ್ತಿದ್ದಾರೆ.

**ಸಾರ್ವಜನಿಕ ಗ್ರಂಥಾಲಯ ಉದ್ಘಾಟನೆ ಬಾಕಿ:**

ಪಟ್ಟಣದ ಹೃದಯಭಾಗದಲ್ಲಿ ನಿರ್ಮಿಸಿದ ಸಾರ್ವಜನಿಕ ಗ್ರಂಥಾಲಯ ಕಟ್ಟಡ ಪೂರ್ಣಗೊಂಡು ಎರಡೂವರೆ ವರ್ಷ ಕಳೆದರೂ ಇನ್ನೂ ಉದ್ಘಾಟನೆ ಆಗಿಲ್ಲ. ಹಳೆಯ ಉಪಕಚೇರಿ ಕಟ್ಟಡದಲ್ಲಿ ನಾಮಮಾತ್ರದ ಗ್ರಂಥಾಲಯ ಕಾರ್ಯನಿರ್ವಹಿಸುತ್ತಿದ್ದು, ವಿದ್ಯಾರ್ಥಿಗಳಿಗೆ ಬೇಕಾದ ಪುಸ್ತಕ ಹಾಗೂ ವ್ಯವಸ್ಥೆ ಲಭ್ಯವಿಲ್ಲ. ಆಡಳಿತದ ನಿರ್ಲಕ್ಷ್ಯದಿಂದ ಜ್ಞಾನಕೇಂದ್ರವೂ ಬಾಗಿಲು ತೆರೆದಿಲ್ಲ ಎಂಬ ಟೀಕೆಗಳು ಕೇಳಿಬರುತ್ತಿವೆ.

**ಸಂಚಾರ ಅರಾಜಕತೆ ಮತ್ತು ಅಸಮರ್ಪಕ ನಿಯಂತ್ರಣ:** ಶ್ರೀರಾಮ ಮಾರುಕಟ್ಟೆ ಹಾಗೂ ಬಸ್ ನಿಲ್ದಾಣ ಪ್ರದೇಶದಲ್ಲಿ ಸಂಚಾರ ದಟ್ಟಣೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಬೀದಿ ವ್ಯಾಪಾರಿಗಳು, ತಳ್ಳುಗಾಡಿಗಳು, ಮತ್ತು ಅಕ್ರಮ ಪಾರ್ಕಿಂಗ್‌ನಿಂದ ರಸ್ತೆ ತುಂಬಿ ಹೋಗಿದ್ದು, ಪಾದಚಾರಿಗಳು ಸಹ ಸುರಕ್ಷಿತವಾಗಿ ಹೋಗಲು ಸಾಧ್ಯವಾಗುತ್ತಿಲ್ಲ. ದ್ವಿಚಕ್ರ ವಾಹನ, ಜೀಪ್, ಕಾರುಗಳು ಎಲ್ಲೆಲ್ಲಿ ಬೇಕಾದರೂ ನಿಲ್ಲಿಸುತ್ತಿರುವುದರಿಂದ ಸಂಚಾರ ಸಂಪೂರ್ಣ ಅಸ್ತವ್ಯಸ್ತವಾಗಿದೆ.

ಪೊಲೀಸರು ಮತ್ತು ಪುರಸಭೆ ಆಡಳಿತ ಪರಸ್ಪರದ ಮೇಲೆ ಹೊಣೆತಳ್ಳುತ್ತಿದ್ದರೆ, ಸಮಸ್ಯೆಗೆ ಯಾರೂ ಶಾಶ್ವತ ಪರಿಹಾರ ಕಂಡುಕೊಳ್ಳುತ್ತಿಲ್ಲ. "ನಿತ್ಯ ಸಂಚಾರದ ತೊಂದರೆ, ಧೂಳು,



ಧ್ವನಿ ಮಾಲಿನ್ಯ ಇವುಗಳಿಂದ ಜನ ಕಂಗಾಲಾಗಿದ್ದಾರೆ" ಎಂದು ವ್ಯಾಪಾರಿಗಳು ಹೇಳುತ್ತಾರೆ.

**ಮಾರುಕಟ್ಟೆ ಅರಾಜಕತೆ, ವ್ಯಾಪಾರಿಗಳ ಏಕಪಕ್ಷೀಯತೆ:** ಶ್ರೀರಾಮ ಮಾರುಕಟ್ಟೆಯಲ್ಲಿ ವ್ಯಾಪಾರಿಗಳು ನಿಯಮವಿಲ್ಲದೆ ಜಾಗ ಆಕ್ರಮಿಸಿಕೊಂಡು ವ್ಯಾಪಾರ ನಡೆಸುತ್ತಿರುವುದು ಕಂಡುಬರುತ್ತಿದೆ. ಕೆಲವರು ತಮ್ಮ ವ್ಯಾಪಾರ ವಸ್ತುಗಳನ್ನು ತುಂಬಾ ಜಾಗದಲ್ಲಿ ಇಟ್ಟು, ಇತರರಿಗೆ ಅವಕಾಶವಿಲ್ಲದಂತೆ ಮಾಡುತ್ತಿದ್ದಾರೆ. ಬೀದಿಬಂಡಿಗಳ ಮೇಲೆ ಆಹಾರ ಮಾರಾಟದಲ್ಲಿ ಸ್ವಚ್ಛತಾ ನಿಯಂತ್ರಣ ಇಲ್ಲ, ಪುರಸಭೆಯು ನಿಯಮ ಪಾಲನೆಗೆ ಸೂಕ್ತ ಕ್ರಮ ಕೈಗೊಂಡಿಲ್ಲ.

ಸಂತೆ ಸ್ಥಳದ ಕೊರತೆ ಮತ್ತು ಆಡಳಿತದ ಮೌನ:

ಪಟ್ಟಣದ ಸಂತೆ ಪ್ರದೇಶದಲ್ಲಿ ವ್ಯಾಪಾರಿಗಳಿಗೆ ಸೂಕ್ತ ಸ್ಥಳಾವಕಾಶ ನೀಡದಿರುವುದರಿಂದ ವ್ಯಾಪಾರಿಗಳಿಗೂ ತೊಂದರೆ, ಸಂಚಾರಕ್ಕೂ ತೊಂದರೆ ಉಂಟಾಗಿದೆ. ಕೆಲವರು ಬಿದಿರಿನಿಂದ ಕಟ್ಟಿದ ಶೆಡ್‌ಗಳಲ್ಲಿ ಕೆಲಸ ನಡೆಸುತ್ತಿದ್ದರೆ, ಕೆಲವರು ನೇರವಾಗಿ ರಸ್ತೆಯ ಮೇಲೆ ವ್ಯಾಪಾರ ಮಾಡಲು ನಿಲ್ಲುತ್ತಿದ್ದಾರೆ.

**ಜನರ ಪ್ರಶ್ನೆ: 'ಸ್ಪಂದನೆ ಯಾವಾಗ?'** ಎಲ್ಲಾ ಸಮಸ್ಯೆಗಳಿಗೆ ಸಂಬಂಧಿಸಿದ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಮೌನ ವಹಿಸಿರುವುದು ನಾಗರಿಕರಲ್ಲಿ ಅಸಮಾಧಾನ ಉಂಟುಮಾಡಿದೆ. "ಜನರ ಸಮಸ್ಯೆ ಗೊತ್ತಿದ್ದರೂ ಕ್ರಮ ಕೈಗೊಳ್ಳುವುದಿಲ್ಲ, ಇಂತಹ ನಿರ್ಲಕ್ಷ್ಯ ಇನ್ನು ಸಹಿಸಲು ಸಾಧ್ಯವಿಲ್ಲ," ಎಂದು ಸ್ಥಳೀಯರು ಕಿಡಿಕಾರಿದ್ದಾರೆ. ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ತಕ್ಷಣ ಜನರ ಧ್ವನಿಗೆ ಸ್ಪಂದಿಸಿ ಮೂಲಸೌಕರ್ಯ ಸುಧಾರಣೆ ಕೈಗೊಂಡರೆ ಮಾತ್ರ ಪಟ್ಟಣದ ಜನ ಜೀವನ ಸುಗಮವಾಗಲಿದೆ ಎಂಬ ಅಭಿಪ್ರಾಯ ನಾಗರಿಕರಲ್ಲಿ ವ್ಯಕ್ತವಾಗಿದೆ.

# ಮಹದೇಶ್ವರ ಬೆಟ್ಟದಲ್ಲಿ ಐದು ದಿನಗಳ ದೀಪಾವಳಿ ಜಾತ್ರೆ

**ಹನೂರು.ಅ.18:–** ತಾಲೂಕಿನ ಪ್ರಸಿದ್ಧ ಧಾರ್ಮಿಕ ಪುಣ್ಯಕ್ಷೇತ್ರ ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿ ಇಂದು ಶನಿವಾರದಿಂದ ಪ್ರಾರಂಭವಾಗುವ ಅಮಾವಾಸ್ಯೆ ದೀಪಾವಳಿ ಜಾತ್ರಾ ಮಹೋತ್ಸವ ಕಾರ್ಯಕ್ರಮಗಳು ಐದು ದಿನಗಳ ಕಾಲ ಜರುಗಲಿದ್ದು ಈ ದೀಪಾವಳಿ ಜಾತ್ರೆಯು ಬುದುವಾರ ರಾತ್ರಿ ಜರುಗುವ ತೆಪ್ಪೋತ್ಸವದ ಮೂಲಕ ಜಾತ್ರೆಗೆ ತೆರೆ ಎಳೆಯಲಾಗುವುದು.

ಇಂದು ಶನಿವಾರ ದೀಪಾವಳಿ ಜಾತ್ರಾ ಮಹೋತ್ಸವದ ಪ್ರಯುಕ್ತ ವಿಶೇಶ ಪೂಜಾ ಕಾರ್ಯಕ್ರಮಗಳು ನೆರವೇರಲಿದ್ದು, ಭಾನುವಾರ ಮಹದೇಶ್ವರ ಸ್ವಾಮಿಗೆ ಎಣ್ಣೆ ಮಜ್ಜನ ಸೇವೆ, ವಿಷೇಶ ಸೇವೆ ಹಾಗೂ ಉತ್ಸವಗಳು ನೆರವೇರಲಿದೆ. ಸೋಮವಾರ ನರಕ ಚತುರ್ಥಶಿ ಮತ್ತು ಉತ್ಸವ, ಮಂಗಳವಾರ ದೀಪಾವಳಿ ಅಮಾವಾಸ್ಯೆಯ ಪ್ರಯುಕ್ತ ಬೆಳಿಗ್ಗೆ 9 ಗಂಟೆಯ ನಂತರ ಹಾಲರುವೆ ಉತ್ಸವ ಹಾಗೂ ವಿಷೇಶ ಸೇವೆಗಳು ನೆರವೇರಿಸಲಾಗುವುದು.

ಬುಧವಾರ ಬೆಳಿಗ್ಗೆ 9 ಗಂಟೆಯ ನಂತರ ಮಹದೇಶ್ವರ ಸ್ವಾಮಿಯ ಮಹಾ ರಥೋತ್ಸವವು ಲಕ್ಷಾಂತರ ಭಕ್ತಾಧಿಗಳ ಸಮ್ಮುಖದಲ್ಲಿ ಜರುಗಲಿದೆ, ನಂತರ ಗುರುಬ್ರಹ್ಮೋತ್ಸವ, ಅನ್ನಬ್ರಹ್ಮೋತ್ಸವ ಹಾಗೂ ರಾತ್ರಿ ಮಹಾ ನೈವೇದ್ಯದ ನಂತರ ನಡೆಯುವ ತೆಪ್ಪೋತ್ಸದ ಮೂಲಕ ದೀಪಾವಳಿ ಜಾತ್ರೆಗೆ ತೆರೆ ಎಳೆಯಲಾಗುವುದು.

ಮಲೆ ಮಹದೇಶ್ವರ ಸ್ವಾಮಿಗೆ ಹಾಲರವಿ ಉತ್ಸವ: ಹಸಿರು ಸೀರೆ ಉಟ್ಟ ಹೆಣ್ಣು ಮಕ್ಕಳು ಹಾಲರವಿಯನ್ನು ತಲೆ ಮೇಲೆ ಹೊತ್ತು ಹಾಲ ಹಳ್ಳದಿಂದ ಪೂಜೆ ಪುನಸ್ಕಾರಗಳನ್ನು ಸಲ್ಲಿಸಿ ಕಳಸ ಹೊತ್ತು ದೇವಾಲಯಕ್ಕೆ ಪಾದಯಾತ್ರೆಯಲ್ಲಿ ತಲುಪುತ್ತಾರೆ.

ಸಂಪ್ರದಾಯದಂತೆ ತಲತಲಾಂತರದಿಂದ ನಡೆದುಕೊಂಡು ಬಂದಿರುವ ಪದ್ಧತಿಯಂತೆ ಸ್ಥಳೀಯ ಬೇಡಗಂಪಣರ 10 ರಿಂದ 12 ವರ್ಷದ 101 ಹೆಣ್ಣು ಮಕ್ಕಳು ಉಪವಾಸ ವಿದ್ದು, ಬೆಳ್ಳಂಬೆಳಿಗ್ಗೆ ಮಲೆ ಬೆಟ್ಟದಿಂದ 7 ಕಿ.ಮೀ ಅರಣ್ಯದ ಕಾಲು ದಾರಿಯಲ್ಲಿ ನಡೆದು ಹಾಲಹಳ್ಳದಲ್ಲಿ ವಾದ್ಯ ಮೇಳದೊಂದಿಗೆ ಮಲೆ ಮಹದೇಶ್ವರ ಬೆಟ್ಟಕ್ಕೆ ಮೆರವಣಿಗೆ ಸಾಗಲಿದ್ದಾರೆ.

ಪಟ್ಟದ ಆನೆ, ಡೊಳ್ಳು ಕುಣಿತದ ಜೊತೆ ಛತ್ರಿ ಚಾಮರದ ಜೊತೆಗೆ ದೇವಾಲಯ ಪ್ರದಕ್ಷಿಣೆ ಹಾಕಿ ಕಳಸಗಳಲ್ಲಿರುವ ನೀರನ್ನು




ಮಲೆ ಮಾದಪ್ಪನಿಗೆ ಅಭಿಷೇಕ ಮಾಡುವ ಮೂಲಕ ಹಾಲರವೆ ಉತ್ಸವ ನೆರವೇರಿಸಲಾಗುವುದು.

ಹಾಲರುವೆ ಹೊತ್ತುತರುವ ಹೆಣ್ಣು ಮಕ್ಕಳು ತಂಬಡಿಗೇರಿ ಗ್ರಾಮದ ಮುಖ್ಯದ್ವಾರದಲ್ಲಿ ಪ್ರವೇಶಿಸಿ ಮುಖ್ಯ ಧ್ವಾರದ ಬಳಿ ಒಂದೆಡೆ ಇರಿಸಿ ಅಲ್ಲಿ ದೊಡ್ಡ ಸಾಲಿಗೆ ಸೇರಿ ಬೇಡಗಂಪಣ ಸಮುದಾಯದ ವರಿಂದ ಕತ್ತಿ ಪವಾಡವನ್ನು ಮಾಡಲಾಗುತ್ತದೆ. ಇದರಲ್ಲಿ ಇಬ್ಬರು ಕತ್ತಿಯನ್ನು ಹಿಡಿದು ನಿಲ್ಲುತ್ತಾರೆ ಮತೊಬ್ಬರು ಕತ್ತಿಯ ಅಲಗಿನ ಮೇಲೆ ಮಲಗುತ್ತಾರೆ.

ಅವರ ಬೆನ್ನ ಮೇಲೆ ಬೇಡಗಂಪಣ ಪ್ರಮುಖ ವ್ಯಕ್ತಿ ಕಾಲನ್ನಿಡುತ್ತಾರೆ ಇದು ಭಕ್ತರಿಗೆ ನಡೆದುಕೊಂಡು ಹೋಗುವ ಭಾಸವಾಗುತ್ತದೆ. ಉಪವಾಸವಿದ್ದು ಬರಿಗಾಲಿನಲ್ಲಿ ಹೆಣ್ಣು ಮಕ್ಕಳು ನಡೆದುಕೊಂಡು ಹೋಗುವ ಮಾರ್ಗಮಧ್ಯ ಯಾವುದೇ ದುಷ್ಟ ಶಕ್ತಿ ಕಣ್ಣು ಬೀಳದಂತೆ ಕತ್ತಿ ಪವಾಡ ನಡೆದುಕೊಂಡು ಬಂದಿದೆ.

ಐದು ದಿನಗಳ ಕಾಲ ನೆರವೇರುವ ದೀಪಾವಳಿ ಜಾತ್ರಾ ಮಹೋತ್ಸವಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರುವುದರಿಂದ ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸಕಲ ಸಿದ್ಧತೆ ಮಾಡಿಕೊಂಡಿದೆ. ಶೌಚಾಲಯದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ನೆರಳಿನ ವ್ಯವಸ್ಥೆ, ಸರದಿ ಸಾಲಿನ ವ್ಯವಸ್ಥೆ, ನಿರಂತರ ಅನ್ನ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಮುಂಗಡವಾಗಿ 2 ಲಕ್ಷ ಲಾಡು ಪ್ರಸಾದವನ್ನು ದಾಸ್ತಾನು ಮಾಡಲಾಗಿದೆ.

## ವೈದಿಕ ಸಂಸ್ಕಾರ ಶಿಬಿರಕ್ಕೆ :ಸನ್ನತಿ ಶ್ರೀಗುರು ಸೋಮೇಶ್ವರ ವೈದಿಕ ಜ್ಯೋತಿ ಸಂಸ್ಥೆ ಗುರುಕುಲ ಹೆಸರು ವಾಸಿ



**ಕಲಬುರ್ಗಿ,ಅ,18–** ಗುರುಕುಲವು ಪ್ರಾಚೀನ ಭಾರತೀಯ ಶಿಕ್ಷಣ ಪದ್ಧತಿಯಾಗಿದೇ, ವಿದ್ಯಾರ್ಥಿಗಳು ತಮ್ಮ ಗುರುಗಳ ಮನೆಯಲ್ಲಿ ಅಥವಾ ಆಶ್ರಮದಲ್ಲಿ ವಾಸಿಸುತ್ತಾ, ವಿದ್ಯೆ ಜೀವನ ಸಂಸ್ಕಾರ ಕಲಿಯುತ್ತಿರುವ ಪದ್ಧತಿ ಭಾರತೀಯರಲ್ಲಿ ಪಾರಂಪರಿಕವಾಗಿ ಬಂದದ್ದು ಎಲ್ಲರಿಗೂ ತಿಳಿದ ವಿಷಯವೇ ಆಗಿದು ಈ ಪದ್ಧತಿಯಲ್ಲಿ ಶಿಸ್ತುಬದ್ಧವಾದ ದಿನಚರಿ, ವೇದ, ಸಂಸ್ಕೃತ ಅಧ್ಯಯನ, ಮತ್ತು ಕಲೆಗಳು, ಕ್ರೀಡೆಗಳಂತಹ ಸರ್ವಾಂಗೀಣ ವಿಕಾಸಕ್ಕೆ ಒತ್ತು ನೀಡಲಾಗುತ್ತಿದೆ ಅದೇ ರೀತಿಯಾಗಿ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಸನ್ನತಿಯ ಶ್ರೀ ಗುರು ಸೋಮೇಶ್ವರ ವೈದಿಕ ಜ್ಯೋತಿ ಸಂಸ್ಥೆ ಗುರುಕುಲ ವತಿಯಿಂದ ಪ್ರತಿ ವರ್ಷ ( ಮೂರು ವರ್ಷಗಳಿಂದ) ವೈದಿಕ ಸಂಸ್ಕಾರ ಶಿಬಿರ ಊರಿನ ಗುರು ಹಿರಿಯರ ದಿಗ್ಗವಾ ಶ್ರೀಗಳ ನಾಲ್ವರ ಶ್ರೀಗಳ ಮಲಕೂಡ ಶ್ರೀಗಳ ಮಳಖೇಡ ಶ್ರೀಗಳ ಆಶೀರ್ವಾದದಿಂದ ಹಾಗೂ ಊರಿನ ಗುರು ಹಿರಿಯರ ಸಹಕಾರದಿಂದ ನೆರವೇರಿಸಿಕೊಂಡು ಬರ್ತಾ ಇದ್ದೇವೆ ಎಂದು ಗುರುಕುಲದ ಮೇಲ್ವಿಚಾರಕರಾದ ಜಗದೀಶ್ ಶಾಸ್ತ್ರಿಗಳು ಸನ್ನತಿ ಅವರು ಸಂಜೆವಾಣಿ ಪತ್ರಿಕಾ ವರದಿಗಾರರೊಂದಿಗೆ ಅಭಿಪ್ರಾಯ ಹಂಚಿಕೊಂಡ ಅವರು ಗುರುಕುಲ ಪದ್ಧತಿಯ ಮುಖ್ಯ ಅಂಶಗಳು ಇದು ಶಿಕ್ಷಕ ಮತ್ತು ವಿದ್ಯಾರ್ಥಿಯ ನಡುವೆ ನಿಕಟ ಸಂಬಂಧವನ್ನು ಬೆಳೆಸುತದೆ

**ಸರ್ವಾಂಗೀಣ ವಿಕಾಸ:** ಕೇವಲ ಶೈಕ್ಷಣಿಕ ವಿಷಯಗಳಿಗೆ ಮಾತ್ರವಲ್ಲದೆ, ನೈತಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳಿಗೂ ಒತ್ತು ನೀಡಲಾಗುತ್ತದೆ ಯೋಗ ಮತ್ತು ವಿದ್ಯಾರ್ಥಿಗಳು ಕೃಷಿ, ಹೈನುಗಾರಿಕೆ ಮತ್ತು ಇತರ ಶ್ರಮದ ಕೆಲಸಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೋತ್ಸಾಹಿಸಲಾಗುತದೆ, ಇದು 'ಶ್ರಮ ಗೌರವ'ದ ಆದರ್ಶವನ್ನು ಬೆಳೆಸುತತದೆ. ದಿನಚರಿ ಗುರುಕುಲದ ದಿನಚರಿಯು ಶಿಸ್ತಿನಿಂದ ಕೂಡಿದ್ದು, ಬೆಳಗಿನ ಪ್ರಾರ್ಥನೆ ಯೋಗ, ಧ್ಯಾನ ಅಧ್ಯಯನ, ಮಧ್ಯಾಹ್ನ ಆಟ ವಿಶ್ರಾಂತಿ ಅಥವಾ ವಸ್ತ್ರಗಳು ಸ್ವಚ್ಛಗೊಳಿಸುವಿಕೆ, ಸಂಜೆಯ ಚಟುವಟಿಕೆ ಸಂಜೆ ಪ್ರಾರ್ಥನೆ ದೇಶದ ಆಚರಣೆಗಳ ವಿಚಾರ ನೈತಿಕ ಕಥೆಗಳು ಹಾಸ್ಯ ಕಥೆಗಳ ಕಾರ್ಯಕ್ರಮ ಒಳಗೊಂಡಿರುತ್ತೆ.ಶ್ರೀ ಗುರು ಸೋಮೇಶ್ವರ ವೈದಿಕ ಜ್ಯೋತಿ ಸಂಸ್ಥೆ ಗುರುಕುಲದ ಪದ್ಧತಿಯಲ್ಲಿ ಬೇಸಿಗೆ ಎರಡು ತಿಂಗಳ ಬೇಸಿಗೆ ಸಂಸ್ಕಾರ ಶಿಬಿರ ಮೂರು ವರ್ಷಗಳಿಂದ ಜಗದೀಶ್ ಶಾಸ್ತ್ರಿಗಳು ಸನ್ನತಿ ನೆರವೇರಿಸಿಕೊಂಡು ಬರುತ್ತಿರುವುದಾಗಿ ತಿಳಿಸಿದರು.

# ಸ್ವಾವಲಂಬಿ ಮಹಿಳೆಗೆ ರೋಟರಿಯಿಂದ ಪ್ರಯಾಣಿಕರ ಆಟೋ ಕೊಡುಗೆ

**ಚಾಮರಾಜನಗರ, ಅ.18–**ನಗರದ ರೋಟರಿ ಸಂಸ್ಥೆಯ ವತಿಯಿಂದ ಸ್ವಾವಲಂಬಿ ಸ್ತ್ರೀ ಯೋಜನೆಯಡಿಯಲ್ಲಿ ಸ್ವಂತ ಆಟೋ ಹೊಂದಲು ಕಂಪನಿಗೆ ಮುಂಗಡ ಹಣ ಪಾವತಿ ಮಾಡಿ, ಮಹಿಳೆಗೆ ಆಟೋವನ್ನು ಕೊಡುಗೆಯಾಗಿ ನೀಡಲಾಗಿದೆ.

ನಗರದ ರೋಟರಿ ಸಂಸ್ಥೆಯು ಸ್ವಾವಲಂಬಿ ಸ್ತ್ರೀಯೋಜನೆಯಡಿಯಲ್ಲಿ ಸ್ವಾವಲಂಬಿಯಾಗಿ ಬದುಕು ಕಟ್ಟಿಕೊಳ್ಳುವ ಆಸೆಯಲ್ಲಿದ್ದ ತಾಲೂಕಿನ ಮಲ್ಲಯ್ಯನಪುರ ಗ್ರಾಮದ ಪವಿತ್ರ ಮಹೇಶ್ ಅವರಿಗೆ ಆಟೋ ತರಬೇತಿಯನ್ನು ಮೈಸೂರಿನಲ್ಲಿ ಕೊಡಿಸಿ, ಸಾರಿಗೆ ಇಲಾಖೆಯಿಂದ ಚಾಲನಾ ಪರವಾನಗಿಯನ್ನು ಸಹ ಮಾಡಿಸಿಕೊಡುವ ಜೊತೆಗೆ ಪ್ರಯಾಣಿಕರ ಆಟೋವನ್ನು ಖರೀದಿಸಲು ಅನುಕೂಲವಾಗುಂತೆ ಮುಂಗಡವಾಗಿ ಪಾವತಿ ಮಾಡಬೇಕಾಗಿದ್ದ 40 ಸಾವಿರ ರೂ.ಗಳನ್ನು ಪಾವತಿಸಿ, ಆಟೋ ಖರೀದಿ ಮಾಡಿ, ಕೀ ಕೊಟ್ಟು ಆಟೋದಲ್ಲಿ ಕುಳಿತು ಪ್ರಯಾಣ ಮಾಡುವ ಮೂಲಕ ಸ್ವಾವಲಂಬಿ ಮಹಿಳೆಗೆ ಉತ್ತೇಜನ ನೀಡಿದರು.

ನಗರದ ಹೊರ ವಲಯದಲ್ಲಿರುವ ಆಟೋ ಶೋರೂಂನಲ್ಲಿ ರೋಟರಿ ಮಾಜಿ ಜಿಲ್ಲಾ ಗರ್ನರ್ ಡಾ. ಆರ್.ಎಸ್. ನಾಗಾರ್ಜುನ್ ಹಾಗೂ ಹಿರಿಯ ಸದಸ್ಯರಾದ ಜಿ.ಆರ್. ಅಶ್ವತ್‌ನಾರಾಯಣ ಹಾಗೂ ರೋಟರಿ ಸಂಸ್ಥೆಯ ಅಧ್ಯಕ್ಷ ಕಾಗಲವಾಡಿ ಚಂದ್ರು ಅವರು ಆಟೋ ಕೀಯನ್ನು ಹಸ್ತಾಂತರಿಸುವ ಮೂಲಕ ಪವಿತ್ರ ಅವರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಪ್ರೋತ್ಸಾಹ ನೀಡಿದರು. ಜೊತೆಗೆ ಆ ಆಟೋದಲ್ಲಿ ಪ್ರಯಾಣ ಮಾಡಿ ಪ್ರಥಮ ಬಾಡಿಗೆಯನ್ನು ಮಹಿಳೆಗೆ ನೀಡುವ ಮೂಲಕ ಉದಾರತೆಯನ್ನು ಮೆರೆದರು.

ಸ್ವಾವಲಂಬಿ ಬದುಕಿಗೆ ಮತ್ತಷ್ಟು ಆಸರೆ : ಜಿಲ್ಲಾ ರೋಟರಿ ಮಾಜಿ ಗೌರ್ನರ್ ಡಾ. ನಾಗಾರ್ಜುನ್ ಮಾತನಾಡಿ, ಮಲ್ಲಯ್ಯನಪುರ ಪವಿತ್ರ ಅವರು ಆಟೋ ಚಾಲನೆ ಕಲಿತು ಬಾಡಿಗೆ ಆಟೋ ಓಡಿಸಿಕೊಂಡು ಜೀವನ ಮಾಡುತ್ತಿದ್ದರು. ಪ್ರತಿ ದಿನ ಬಾಡಿಗೆ ಆಟೋದಲ್ಲಿ ಮಲ್ಲಯ್ಯನಪುರ ಹಾಗೂ ಸುತ್ತಮುತ್ತಲಿನ ಪ್ರಯಾಣಿಕರು, ಹಾಗೂ ಗ್ರಾಮೆಂಟ್ಸ್ ಹೋಗುವ



ಮಹಿಳೆಯರನ್ನು ಟ್ರಾಪ್ ಮಾಡುತ್ತಿದ್ದರು. ಇವರನ್ನು ರೋಟರಿ ಸಂಸ್ಥೆಯ ಪದಾಧಿಕಾರಿಗಳು ಗುರುತಿಸಿ, ಚಾಲನಾ ತರಬೇತಿಯನ್ನು ಕೊಡಿಸಿ, ಮತ್ತಷ್ಟು ನೈಪುಣ್ಯತೆಯನ್ನು ಆಟೋ ಚಾಲನೆಯಲ್ಲಿ ಕಲಿಸಿ, ಪರವಾನಗಿಯನ್ನು ಕೊಡಿಸಿ, ಈಗ ಆಟೋವನ್ನು ಖರೀದಿ ಕೊಟ್ಟಿದೆ. ನಮ್ಮ ಜಿಲ್ಲೆಯಲ್ಲಿ ಇಂಥ ಅಸಕ್ತಿವುಳ್ಳ ಯಾರೇ ಮಹಿಳೆಯರು ಮುಂದೆ ಬಂದರು ಸಹ ರೋಟರಿ ಸಹಾಯ ಮಾಡಲು ಸಿದ್ದವಿದೆ. ಮಹಿಳೆಯರು ಸ್ವಾವಲಂಬಿಕ ಬದುಕು ಕಟ್ಟಿಕೊಳ್ಳಬೇಕು ಎಂಬುದು ನಮ್ಮ ಉದ್ದೇಶವಾಗಿದೆ ಎಂದರು.

ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿ, ಮಹಿಳೆಯರಿಗೆ ಮಲ್ಲಯ್ಯನಪುರ ಪವಿತ್ರ ಮಾದರಿಯಾಗಿದ್ದಾರೆ. ಸ್ವಂತ ದುಡಿಮೆ ಮಾಡಿ ಬದುಕು ಕಟ್ಟಿಕೊಳ್ಳಬೇಕೆಂಬ ಆಸೆಯನ್ನು ಹೊಂದಿದ್ದ ಪವಿತ್ರ ಅವರಿಗೆ ರೋಟರಿ ಸಂಸ್ಥೆಯ ಸಹಾಯ ಮತ್ತು ಉತ್ತೇಜನ ನೀಡಿದೆ. ಇಂಥವರು ಬಹಳಷ್ಟು ಮಂದಿ ಇದ್ದಾರೆ. ಅವರಿಗೆ ಪವಿತ್ರ ಅವರು ಪ್ರೇರಣೆಯಾಗಬೇಕು. ಮತ್ತಷ್ಟು ಮಹಿಳೆಯರು ಇಂಥ ಉದ್ಯಮಗಳಲ್ಲಿ ತೊಡಗಿಸಿಕೊಳ್ಳಲಿ ಎಂದು ಶುಭಕೋರಿದರು.

ಆಟೋ ಚಾಲಕಿ ಪವಿತ್ರ ಮಾತನಾಡಿ, ನಾನು ಗಂಡ, ಮಕ್ಕಳು ಹಾಗು ಮನೆ ಜವಾಬ್ದಾರಿಯ ನಡುವೆಯು ಆಟೋ ಓಡಿಸುತ್ತಿದ್ದೆ. ರೋಟರಿಯವರು ಸ್ವಂತ ಆಟೋವನ್ನು ಹೊಂದುವ ಶಕ್ತಿಯನ್ನು ನನಗೆ ನೀಡಿದ್ದಾರೆ. ಅವರ ಸಹಾಯಕ್ಕೆ ನಮ್ಮ ಕುಟುಂಬ ಚಿರಋಣಿಯಾಗಿದ್ದೇವೆ ಎಂದು ಭಾವುಕರಾದರು.

ಈ ಸಂದರ್ಭದಲ್ಲಿ ರೋಟರಿ ಸದಸ್ಯರಾದ ಸಿ.ಎ. ನಾರಾಯಣ್, ಮೋಹನ್, ಸುಭಾಷ್, ಪ್ರಕಾಶ್, ಕಮರಾಜ್, ಮಹದೇವಸ್ವಾಮಿ, ಜಿ. ಅಂಕಶೆಟ್ಟಿ, ಸಿದ್ದಮಲ್ಲಪ್ಪ ಮೊದಲಾಧವರು ಇದ್ದರು.


# ವ್ಯಾಪಾರವಿಲ್ಲದೆ ದೇಶದ ಆರ್ಥಿಕತೆ ಬೆಳೆಯಲ್ಲ : ರಾಜನಾಥ್‌ಸಿಂಗ್

**ಲಕ್ನೊ, ಅ. 18–** ವ್ಯಾಪಾರವಿಲ್ಲದೆ ದೇಶದ ಆರ್ಥಿಕತೆಯನ್ನು ಬಲಪಡಿಸಲು ಸಾಧ್ಯವಿಲ್ಲ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಒತ್ತಿ ಹೇಳಿದ್ದಾರೆ, ಆರ್ಥಿಕ ಬೆಳವಣಿಗೆಯು ವ್ಯಕ್ತಿಗಳ ಖರ್ಚು ಸಾಮರ್ಥ್ಯ ಮತ್ತು ವ್ಯಾಪಾರ ಚಟುವಟಿಕೆಗಳ ವೇಗವನ್ನು ಅವಲಂಬಿಸಿದೆ ಎಂದು ಅವರು ತಿಳಿಸಿದ್ದಾರೆ.

ಆತ್ಮನಿರ್ಭರ ಭಾರತ ಅಭಿಯಾನದ ಹರ್ ಘರ್ ಸ್ವದೇಶಿ, ಘರ್ ಘರ್ ಸ್ವದೇಶಿ ಅಭಿಯಾನದಡಿಯಲ್ಲಿ ಲಕ್ನೊ ಬಿಜೆಪಿ ಘಟಕ ಆಯೋಜಿಸಿದ್ದ ವ್ಯಾಪಾರಿ ಮಿಲನ್ ಸಮ್ಮೆಳನವನ್ನು ಉದ್ದೇಶಿಸಿ ಮಾತನಾಡಿದ ಸಿಂಗ್, ವ್ಯಾಪಾರ ಸಂಘಗಳು ಮತ್ತು ಪದಾಧಿಕಾರಿಗಳು ವರ್ಷಕ್ಕೊಮ್ಮೆಯಾದರೂ ಸಭೆ ಸೇರಿ ಸಮಸ್ಯೆಗಳನ್ನು ಸಾಮೂಹಿಕವಾಗಿ ಚರ್ಚಿಸಬೇಕು ಎಂದು ಒತ್ತಾಯಿಸಿದರು, ಸಂಘಟಿತ ಪ್ರಯತ್ನಗಳ ಮೂಲಕ ಅನೇಕ ಸಮಸ್ಯೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಪರಿಹರಿಸಲಾಗುತ್ತದೆ ಎಂದು ಹೇಳಿದರ.

ವ್ಯಾಪಾರದ ವಿಷಯದಲ್ಲಿ, ವ್ಯವಹಾರವಿಲ್ಲದೆ, ದೇಶದ ಆರ್ಥಿಕತೆಯನ್ನು ಬಲಪಡಿಸಲು ಸಾಧ್ಯವಿಲ್ಲ. ಜನರು ತಮ್ಮ ಜೇಬಿನಲ್ಲಿ ಹಣವನ್ನು ಹೊಂದುವವರೆಗೆ ಮತ್ತು ವ್ಯಾಪಾರ ಚಟುವಟಿಕೆಗಳು ವೇಗಗೊಳ್ಳುವವರೆಗೆ, ಆರ್ಥಿಕತೆಗೆ ಅಗತ್ಯವಿರುವ ವೇಗವನ್ನು ಸಾಧಿಸಲು ಸಾಧ್ಯವಿಲ್ಲ ಎಂದು ಸಿಂಗ್ ಹೇಳಿದರು.ಪ್ರಧಾನಿ ನರೇಂದ್ರ ಮೋದಿ ಅಧಿಕಾರ ವಹಿಸಿಕೊಂಡ ನಂತರ, ಸ್ವದೇಶಿಗಾಗಿ ಮಹಾತ್ಮ ಗಾಂಧಿಯವರ ಬಲವಾದ ಪ್ರತಿಪಾದನೆಯನ್ನು ಅನುಸರಿಸಿ, ಸ್ಥಳೀಯ ಉತ್ಪಾದನೆಯನ್ನು ಉತ್ತೇಜಿಸಲು ಒತ್ತು ನೀಡಿದರು ಎಂದು ಲಕ್ನೊದ ಲೋಕಸಭಾ ಸಂಸದರು ನೆನಪಿಸಿಕೊಂಡರು.

ನಾವು ಭಾರತವನ್ನು ಬಲಿಷ್ಠ ರಾಷ್ಟ್ರವನ್ನಾಗಿ ಮಾಡಲು, ಅದರ ಜಾಗತಿಕ ಸ್ಥಾನಮಾನವನ್ನು ಹೆಚ್ಚಿಸಲು ಮತ್ತು ಬಡತನ ಮತ್ತು ನಿರುದ್ಯೋಗವನ್ನು ಪರಿಹರಿಸಲು ಬಯಸಿದರೆ, ನಾವು ಸ್ಥಳೀಯ ಉತ್ಪಾದನೆಯ ಮಾರ್ಗವನ್ನು ಅಳವಡಿಸಿಕೊಳ್ಳಬೇಕು; ಇಲ್ಲದಿದ್ದರೆ, ಈ ಗುರಿಗಳನ್ನು ಸಾಧಿಸಲು ಸಾಧ್ಯವಿಲ್ಲ ಎಂದು ಅವರು ಹೇಳಿದರು.ಆರ್ಥಿಕತೆಯಲ್ಲಿ ವ್ಯಾಪಾರಿಗಳ ನಿರ್ಣಾಯಕ ಪಾತ್ರವನ್ನು ಸಿಂಗ್ ಒತ್ತಿ ಹೇಳಿದರು,



ಅವರನ್ನು ರಕ್ತ ಪರಿಚಲನೆ ಮಾಡುವ ಮಾನವ ದೇಹದಲ್ಲಿನ ರಕ್ತನಾಳಗಳು ಮತ್ತು ಅಪಧಮನಿಗಳಿಗೆ ಹೋಲಿಸಿದರು. ವ್ಯವಹಾರ ನಿಂತುಹೋದರೆ, ಇಡೀ ಆರ್ಥಿಕ ವ್ಯವಸ್ಥೆಯು ಸ್ಥಗಿತಗೊಳ್ಳುತ್ತದೆ. ವ್ಯಾಪಾರ ಮತ್ತು ವಾಣಿಜ್ಯ ಯಾವಾಗಲೂ ಮುಂದುವರಿಯಬೇಕು ಎಂದು ಅವರು ಹೇಳಿದರು. ಆಸ್ಟ್ರೆಲಿಯಾದಲ್ಲಿ ತಮ್ಮ ಇತ್ತೀಚಿನ ಸಂವಹನಗಳನ್ನು ಕೇಂದ್ರ ಸಚಿವರು ಉಲ್ಲೇಖಿಸಿದರು, ಆ ದೇಶವು ಭಾರತಕ್ಕಿಂತ ಕಡಿಮೆ ಚಿಲ್ಲರೆ ವ್ಯಾಪಾರಿಗಳನ್ನು ಹೊಂದಿದೆ ಮತ್ತು ಅಲ್ಲಿನ ಪ್ರಧಾನಿ ಮತ್ತು ಉಪ ಪ್ರಧಾನಿ ಸೇರಿದಂತೆ ಅಧಿಕಾರಿಗಳು ಭಾರತದ ಬೆಳೆಯುತ್ತಿರುವ ಆರ್ಥಿಕ ಬಲವನ್ನು ಶ್ಲಾಘಿಸಿದರು. ಭಾರತವು ಪ್ರಗತಿ ಸಾಧಿಸುತ್ತಿರುವುದನ್ನು ಸಾಧಿಸಲು ಅವರು ಬಯಸುತ್ತಾರೆ ಎಂದು ಅವರು ಹೇಳಿದರು.

ಭಾರತದ ರಕ್ಷಣಾ ಉತ್ಪಾದನಾ ಸಾಮರ್ಥ್ಯಗಳನ್ನು ಉಲ್ಲೇಖಿಸುತ್ತಾ, ತೇಜಸ್ ಮಾರ್ಕ್ 1ಎ 4.5–ಪೀಳಿಗೆಯ ಯುದ್ಧ ವಿಮಾನಗಳನ್ನು ಉತ್ಪಾದಿಸುವ ನಾಸಿಕ್‌ನಲ್ಲಿರುವ ಹಿಂದೂಸ್ತಾನ್ ಏರೋನಾಟಿಕ್ ಲಿಮಿಟೆಡ್‌ನ ಶಾಖೆಯನ್ನು ಸಿಂಗ್ ಎತ್ತಿ ತೋರಿಸಿದರು.ಮೊದಲು, ನಾವು ಬಹುತೇಕ ಎಲ್ಲವನ್ನೂ ಆಮದು ಮಾಡಿಕೊಳ್ಳಬೇಕಾಗಿತ್ತು, ಆದರೆ ಈಗ ಯುದ್ಧ ಜೆಟ್‌ಗಳನ್ನು ಭಾರತದಲ್ಲಿ ತಯಾರಿಸಲಾಗುತ್ತಿದೆ ಎಂದು ಅವರು ಹೇಳಿದರು.

ಭಾರತದ ರಕ್ಷಣಾ ವಲಯವು ವೇಗವಾಗಿ ಬೆಳೆದಿದೆ, ಮಿಲಿಟರಿ ಉಪಕರಣಗಳ ಆಮದು ಮತ್ತು ವಹಿವಾಟುಗಳು ಮುಂದುವರೆದಿವೆ ಎಂದು ಅವರು ಹೇಳಿದರು, ಆದರೆ ಮೊದಲು, ಸಣ್ಣಪುಟ್ಟ ವಸ್ತುಗಳನ್ನು ಸಹ ವಿದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿತ್ತು.ನಾನು ರಕ್ಷಣಾ ಸಚಿವನಾದಾಗ, ಒಟ್ಟು ಉತ್ಪಾದನೆಯು ಸುಮಾರು 45,000–46,000 ಕೋಟಿ ರೂ.ಗಳಷ್ಟಿತ್ತು. ಈಗ, ಉತ್ಪಾದನೆಯು ಸುಮಾರು 1.5 ಲಕ್ಷ ಕೋಟಿ ರೂ.ಗಳನ್ನು ತಲುಪಿದೆ ಎಂದು ಅವರು ಹೇಳಿದರು.

# ಚಿತ್ತಾಪುರದಲ್ಲಿ ಅಳವಡಿಸಿದ್ದ ಭಗವಾಧ್ವಜ ತೆರವುಗೊಳಿಸಿದ ಪುರಸಭೆ ಅಧಿಕಾರಿಗಳು



**ಚಿತ್ತಾಪುರ;ಅ.18–** ಪಟ್ಟಣದಲ್ಲಿ ರವಿವಾರದಂದು ನಡೆಯುವ ಆರೆಸ್ಸೆಸ್ ಪಥಸಂಚಲನ ನಿಮಿತ್ತ ಹಲವೆಡೆ ಅಳವಡಿಸಲಾಗಿದ್ದ ಆರೆಸ್ಸೆಸ್ ಬ್ಯಾನರ್ ಹಾಗೂ ಭಗವಾ ಧ್ವಜಗಳನ್ನು ಅಧಿಕಾರಿಗಳು ತಡರಾತ್ರಿ ತೆರವು ಮಾಡಿದ್ದಾರೆ.

ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ ತಡರಾತ್ರಿ ಪುರಸಭೆ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ ಭಗವಾ ಧ್ವಜಗಳು ಹಾಗೂ ಬ್ಯಾನರ್ ಗಳನ್ನು ತೆರವುಗೊಳಿ ಸಿದ್ದಾರೆ ಎಂದು ತಿಳಿದುಬಂದಿದೆ.

ಸರ್ಕಾರಿ ಜಾಗಗಳು, ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಸಂಘ–ಸಂಸ್ಥೆ ಗಳ ಕಾರ್ಯಕ್ರಮಕ್ಕೆ ಪೂರ್ವಾನುಮತಿ ಕಡ್ಡಾಯ ಎಂದು ಇತ್ತೀಚೆಗೆ ರಾಜ್ಯ ಸ ರ್ಕಾರ ಆದೇಶ ಹೊರಡಿಸಿತ್ತು. ಸ್ಥ ಳೀಯ ಆಡಳಿತ ವಿರುದ್ಧ ಹಿಂದೂ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿ ದ್ದು, ತೀವ್ರ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿವೆ. ಈ ಕುರಿತು ವಿರೋ ಧ ಪಕ್ಷದ ನಾಯಕ ಆರ್.ಅಶೋಕ್ ಅವರು ಕೂಡ ಟ್ವಿಟ್ ಮಾಡಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪ ಡಿಸಿದ್ದಾರೆ.

# ಪ್ರಾಮಾಣಿಕತೆ ಮೆರೆದ ಬಸ್ ಚಾಲಕ, ನಿರ್ವಾಹಕ



**ಭಾಲ್ಕಿ,ಅ.18–**ಪ್ರಯಾಣಿಕರೊಬ್ಬರು ಬಸ್‌ನಲ್ಲಿ ಮರೆತು ಹೋಗಿದ್ದ 1.60 ಲಕ್ಷ ರೂಪಾಯಿಗಳನ್ನು ಅವರಿಗೆ ಮರಳಿ ತಲುಪಿಸುವುದರ ಮೂಲಕ ಬಸ್ ಚಾಲಕ ಮತ್ತು ನಿರ್ವಾಹಕ ಪ್ರಮಾಣಿಕತೆ ಮೆರೆದಿದ್ದಾರೆ.

ಭಾಲ್ಕಿ ಘಟಕದ ಬಸ್ ಚಾಲಕ ಹನೀಫ್ ಮತ್ತು ನಿರ್ವಾಹಕ ಸಿದ್ದರಾಮ ಶೆಟ್ಕರ್ ಅವರು ಪ್ರಯಾಣಿಕನಿಗೆ ಹಣ ಮರಳಿ ನೀಡುವುದರ ಮೂಲಕ ಪ್ರಾಮಾಣಿಕತೆ ಮೆರೆದಿದ್ದಾರೆ.

ಭಾಲ್ಕಿಯಿಂದ ಬಾಡಸಾಂಗಿಗೆ ಹೋಗುವ ಬಸ್ಸಿನಲ್ಲಿ ಪ್ರಯಾಣಿಕರೊಬ್ಬರು 1.60 ಲಕ್ಷ ರೂಗಳಿದ್ದ ಹಣದ ಬ್ಯಾಗನ್ನು ಬಸ್ಸಿನಲ್ಲಿಯೇ ಇಟ್ಟು ಮರೆತು ಹೋಗಿದ್ದರು. ಬಸ್ ಚಾಲಕ ಮತ್ತು ನಿರ್ವಾಹಕ ಪ್ರಯಾಣಿಕನಿಗೆ ಹಣ ಮರಳಿ ನೀಡಿ ಪ್ರಾಮಾಣಿಕತೆ ಮೆರೆದಿದ್ದು ಇದಕ್ಕೆ ಜನರಿಂದ ಮೆಚ್ಚುಗೆ ವ್ಯಕ್ತವಾಗಿದೆ.

## ಅಂಬಿಗರ ಚೌಡಯ್ಯ ಮೂರ್ತಿ ವಿರೂಪ: ಮೂವರು ಆರೋಪಿಗಳ ಬಂಧನ



**ಕಲಬುರಗಿ,ಅ.18–** ಶಹಾಬಾದ ತಾಲ್ಲೂಕಿನ ಮುತ್ತಗಾ ಗ್ರಾಮದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಮೂರ್ತಿ ವಿರೂಪಗೊಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಎಸ್‌ಪಿ ಅಡ್ಡೂರು ಶ್ರೀನಿವಾಸಲು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅ.10 ರಂದು ಬೆಳಗಿನಜಾವ ಮುತ್ತಗಾ ಗ್ರಾಮದಲ್ಲಿ ನಿಶಶರಣ ಅಂಬಿಗರ ಚೌಡಯ್ಯನವರ ಮೂರ್ತಿಯನ್ನು ದುಷ್ಕರ್ಮಿಗಳು ವಿರೂಪಗೊಳಿಸಿದ್ದರು. ಈ ಬಗ್ಗೆ ಶಹಾಬಾದ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿಗಳ ಪತ್ತೆಗೆ ಹೆಚ್ಚುವರಿ ಎಸ್‌ಪಿ ಮಹೇಶ್ ಮೇಘಣ್ಣನವರ್, ಶಹಾಬಾದ ಡಿಎಸ್‌ಪಿ ಶಂಕರಗೌಡ ಪಾಟೀಲ ಅವರ ಮಾರ್ಗದರ್ಶನದಲ್ಲಿ ಶಹಾಬಾದ ಪಿಐ ನಟರಾಜ ಲಾಡೆ, ಚಿತ್ತಾಪುರ ಸಿಪಿಐ ಚಂದ್ರಶೇಖರ ತಿಗಡಿ, ಕಾಳಗಿ ಸಿಪಿಐ ಜಗದೇವಪ್ಪ ಪಾಳಾ ಅವರ ನೇತೃತ್ವದಲ್ಲಿ ವಾಡಿ ಪಿಎಸ್‌ಐ ತಿರುಮಲೇಶ, ಪಿಎಸ್‌ಐಗಳಾದ ಗೌತಮ, ಸಿದ್ದಲಿಂಗ, ಚಂದ್ರಕಾಂತ, ಎಎಸ್‌ಐಗಳಾದ ಗುಂಡಪ್ಪ, ಮಲ್ಲಿಕಾರ್ಜುನ, ಸಿಬ್ಬಂದಿಗಳಾದ ನಾಗೇಂದ್ರ, ಮಲ್ಲಿಕಾರ್ಜುನ, ದೊಡ್ಡಪ್ಪ, ಬಲರಾಮ, ಸಮತೋಷ, ಹುಸೇನ ಪಾಷಾ, ಬಳಿಯನ ಸಿದ್ದಯ್ಯಾ, ಆರೀಫ್ ಅವರನ್ನು ಒಳಗೊಂಡ ಮೂರು ತಂಡ ರಚಿಸಲಾಗಿತ್ತು. ಈ ತಂಡ ತನಿಖೆ ನಡೆಸಿ ಜೀವಣಗಿ ಗ್ರಾಮದ ಮಲ್ಲಿಕಾರ್ಜುನ ತಂದೆ ವಿಶ್ವರಾಧ್ಯ ಪಾಟೀಲ, ಮುತ್ತಗಿ ಗ್ರಾಮದ ಸಾಬಣ್ಣ ತಂದೆ ಮಲ್ಲಪ್ಪ ಪಟ್ಟೆದಾರ ಮತ್ತು ಶಿವರಾಜ ತಂದೆ ಶಂಕರ ನಾಟಿಕಾರ ಎಂಬುವವರನ್ನು ಬಂಧಿಸಿ ಮೊಬೈಲ್‌ಗಳನ್ನು ಜಪ್ತಿ ಮಾಡಿದೆ. ಬಂಧಿತ ಮೂವರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ವಿವರಿಸಿದರು.ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯವನ್ನು ಅವರು ಶ್ಲಾಘಿಸಿದರು.

## ಮಹಿಳಾ ಪಿಎಸ್‌ಐಗೆ ಜೀವಬೆದರಿಕೆ ಹಾಕಿದ ವ್ಯಕ್ತಿಗೆ ಶಿಕ್ಷೆ

**ಕಲಬುರಗಿ.ಅ.18–** ವ್ಯಕ್ತಿಯೊಬ್ಬ ಮಹಿಳಾ ಪಿಎಸ್‌ಐಗೆ ನಿಂದಿಸಿ ಜೀವ ಬೆದರಿಕೆ ಹಾಕಿದ ಆರೋಪ ಸಾಬೀತಾದ್ದರಿಂದ ಚಿಂಚೋಳಿಯ ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶ ದತ್ತಕುಮಾರ ಜವಳಕರ್ ಅವರು ಅಪರಾಧಿಗೆ 15 ದಿನ ಸಾದಾ ಜೈಲು ಶಿಕ್ಷೆ ಮತ್ತು ಒಟ್ಟು 14,500 ರೂ ದಂಡ ವಿಧಿಸಿದ್ದಾರೆ ತೀರ್ಪು ನೀಡಿದ್ದಾರೆ.ಚಿಂಚೋಳಿಯ ಮಂಜುನಾಥ ಬಸವರಾಜ ಕೊರವಿ ಶಿಕ್ಷೆಗೆ ಗುರಿಯಾದ ವ್ಯಕ್ತಿ.ಕಳೆದ 2017 ರ ಜನವರಿ 22 ರಂದು ರಟಕಲ್ ಠಾಣೆ ಪಿಎಸ್‌ಐ ಅಕ್ಕಮಹಾದೇವಿ ಅವರು ಸರಕಾರಿ ಜೀಪಿನಲ್ಲಿ ಕರ್ತವ್ಯದ ಮೇಲೆ ಮಹಾಗಾಂವ ಕಡೆಗೆ ತೆರಳುತ್ತಿದ್ದಾಗ, ಜೀಪು ತಡೆದ ಮಂಜುನಾಥ ವಾಹನ ಅಪಘಾತವೊಂದರ ವಿಷಯದಲ್ಲಿ ವಾಗ್ವಾದಕ್ಕಿಳಿದು ಪಿಎಸ್ ಐ ಅವರನ್ನು ನಿಂದಿಸಿದ್ದರು." ಅಪಘಾತವಾದ ವಾಹನ ನನ್ನದಿದ್ದು,ನಾನು ವಾಹನ ನಿರೀಕ್ಷಕನಿದ್ದು, ನಿನಗೆ ಕಾನೂನು ಗೊತ್ತಿಲ್ಲ" ಮುಂತಾಗಿ ನಿಂದಿಸಿ ಜೀವ ಬೆದರಿಕೆ ಹಾಕಿದ್ದರು ಎಂದು ಪ್ರಕರಣ ದಾಖಲಾಗಿತ್ತು.ಪ್ರಕರಣದ ವಾದ ವಿವಾದ ಆಲಿಸಿದ ನ್ಯಾಯಾಧೀಶರು ಶಿಕ್ಷೆಯ ಪ್ರಮಾಣ ಪ್ರಕಟಿಸಿ ಆದೇಶಿಸಿದ್ದಾರೆ. ಸರಕಾರದ ಪರವಾಗಿ ಸಹಾಯಕ ಸರಕಾರಿ ಅಭಿಯೋಜಕ ಶಾಂತಕುಮಾರ ಪಾಟೀಲ ಅವರು ವಾದ ಮಂಡಿಸಿದ್ದರು.

# ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯಿಂದ ಸಭೆ ನಮ್ಮೆಲ್ಲರ ಭವಿಷ್ಯಕ್ಕೆ ಜೈವಿಕ ಇಂಧನ ಅತ್ಯಗತ್ಯ: ಎಸ್.ಇ.ಸುಧೀಂದ್ರ



**ಯುವ ಮಾರ್ಗ ಸುದ್ದಿ**

**ರಾಯಚೂರು,ಅ.18–** ಜೈವಿಕ ಇಂಧನವು ನಮ್ಮೆಲ್ಲರ ಭವಿಷ್ಯದ ಇಂಧನವಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಕಾರ್ಯಯೋಜನೆ ರೂಪಿಸುತ್ತಿದ್ದು, ಕೇರೋಸಿನ್ ಈಗ ಯಾವ ರೀತಿಯಲ್ಲಿ ಮನೆಮನೆಗೆ ತಲುಪುತ್ತದೆಯೋ ಅದೇ ಮಾದರಿಯಲ್ಲಿ ಬೈಯೋ ಡಿಸೈಲ್‌ನ್ನು ಕೂಡ ಮನೆಮನೆಗೆ ತಲುಪಿಸಲು ಪ್ರಯತ್ನ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಎಸ್ ಇ ಸುಧೀಂದ್ರ ಅವರು ಹೇಳಿದರು.

ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ (ಕೆಎಸ್‌ಬಿಡಿಬಿ) ಬೆಂಗಳೂರು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಮತ್ತು ಕರ್ನಾಟಕ ಸ್ಟೇಟ್ ಕೌನ್ಸಿಲ್ ಫಾರ್ ಸಾಯನ್ಸ್ ಅಂಡ್ ಟೆಕ್ನಾಲಜಿ (ಕೆಎಸ್‌ಸಿಎಸ್‌ಟಿ) ಇವರ ಸಹಯೋಗದಲ್ಲಿ ನಗರದ ಕೃಷಿ ವಿಶ್ವವಿದ್ಯಾಲಯದ ಆಡಳಿತ ಭವನದಲ್ಲಿನ ಸಭಾಂಗಣದಲ್ಲಿ ಅಕ್ಟೋಬರ್ 17ರಂದು ಬಿಆರ್‌ಐಡಿಸಿ ಕೇಂದ್ರಗಳ ಪ್ರತಿನಿಧಿಗಳ ಮತ್ತು ಎನ್‌ಜಿಓ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ಕಾಲ ಬದಲಾದಂತೆ ನಾವು ಕೂಡ ಬದಲಾಗಬೇಕಿದೆ. ಜನತೆಗೆ ಅಗತ್ಯ ಇರುವುದನ್ನು ಪೂರೈಸಲು ರಾಜ್ಯ ಸರ್ಕಾರವು ಬದ್ಧವಾಗಿದೆ. ನವ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಬಳಸಿಕೊಂಡು ಜನತೆಗೆ ಅನುಕೂಲ ಕಲ್ಪಿಸಬೇಕು ಎಂಬುದು ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯ ಅವರ ದೂರದೃಷ್ಟಿಯಾಗಿದೆ. ಜೈವಿಕ ಇಂಧನ ಉತ್ಪಾದನೆಗೆ ಸಂಬಂಧಿಸಿದಂತೆ ಈಗಿರುವ ಸವಾಲುಗಳು ಮತ್ತು ಸಾಧ್ಯತೆಗಳ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಹಾಗೂ ಕಾನೂನು ಸಚಿವರಾದ ಹೆಚ್.ಕೆ.ಪಾಟೀಲ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು, ಸಚಿವರಾದ ಪ್ರಿಯಾಂಕ ಖರ್ಗೆ ಅವರೊಂದಿಗೆ ಚರ್ಚಿಸಿದ್ದು ಹೊಸ ಜೈವಿಕ ಇಂಧನ ನೀತಿ ರೂಪಿಸುವ ಪ್ರಯತ್ನಕ್ಕೆ ಪ್ರೋತ್ಸಾಹ ನೀಡುವುದಾಗಿ ತಿಳಿಸಿದ್ದಾರೆ ಎಂದರು.

ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ರೂಪಿಸುವ ಯಾವುದೇ ರೀತಿಯ ಯೋಜನೆಗಳಿಗೆ ಬಿಆರ್‌ಐಡಿಸಿ ಮತ್ತು ಎನ್‌ಜಿಓ ಹಾಗೂ ಇನ್ನಿತರರ ಸಹಕಾರ ಅಗತ್ಯವಾಗಿದೆ. ಜೈವಿಕ ಇಂಧನವನ್ನು ವಾಹನಗಳಿಗೆ ಸಹ ಬಳಸಬಹುದಾಗಿದೆ. ದಿನೇದಿನೆ ಜೈವಿಕ ಇಂಧನಕ್ಕೆ ಹೆಚ್ಚಿನ ಬೇಡಿಕೆ ಬರಲಿದ್ದು, ಇದಕ್ಕೆ ಬೇಕಾದ ಕಚ್ಚಾ ಸಾಮಗ್ರಿಯ ಉತ್ಪಾದನೆಯ ಬಗ್ಗೆ ನಾವು ಹೆಚ್ಚಿನ ಗಮನ ಹರಿಸಬೇಕಿದೆ. ಜೈವಿಕ ಇಂಧನ ತಯಾರಿಕೆಗೆ ಸಹಕಾರಿಯಾಗುವ ಹೊಂಗೆ, ಸುರಹೊನ್ನ ಮತ್ತು ಬೇವು ಬೆಳೆ ಬೆಳೆಯಲು ರೈತರಿಗೆ ಪ್ರೋತಾಹ ನೀಡಬೇಕಿದೆ ಎಂದರು. ಹೊಂಗೆ, ಸುರಹೊನ್ನ ಮತ್ತು ಬೇವು ಬೆಳೆಯ ಉಪ ಉತ್ಪನ್ನಗಳಿಂದ ಸೋಪು, ಪಿನಾಯಿಲ್ ಕೂಡ ತಯಾರಿಸಬಹುದಾಗಿದೆ ಎಂದರು.

ಸಮಾರಂಭದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಎಂ.ಹನುಮಂತಪ್ಪ ಮಾತನಾಡಿದರು. ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರಾದ ಶಿವಶಂಕರ ಎಲ್ ಅವರು ಪ್ರಾಸ್ತಾವಿಕ ಮಾತನಾಡಿದರು.

ಸಮಾರಂಭದಲ್ಲಿ ಸಂಶೋಧನಾ ನಿರ್ದೇಶಕರಾದ ಅಮರೇಗೌಡ, ಕಾರ್ಯನಿರ್ವಾಹಕ ಎಂಜಿನಿಯರ್ ದಿವಾಕರರಾವ್, ಡಾ.ಲೋಹಿತ್ ಬಿ.ಆರ್., ಜಯರಾಮ್, ಇವರು ಜೈವಿಕ ಇಂಧನ ಉದ್ಯಾನವನದ ಸಂಯೋಜಕರಾದ ಡಾ ಶ್ಯಾಮರಾವ ಕುಲಕರ್ಣಿ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಬಸವರಾಜ ಹಾಗೂ ಬಿಆರ್‌ಐಡಿಸಿ ಕೇಂದ್ರದ 32 ಜಿಲ್ಲೆಗಳ ಪ್ರತಿನಿಧಿಗಳು ಹಾಗೂ ಎನ್‌ಜಿಓ ಪ್ರತಿನಿಧಿಗಳು ಇದ್ದರು. ಕೃಷಿ ವಿವಿಯ ಮುಖ್ಯ ವಿಜ್ಞಾನಿ ಮುನಿಸ್ವಾಮಿ ಎಸ್ ಅವರು ಸ್ವಾಗತಿಸಿದರು. ಆಕಾಶವಾಣಿ ವರದಿಗಾರರಾದ ಅಮರೇಶ ಅವರು ನಿರೂಪಿಸಿದರು.

# ನಿಗದಿತ ಅವಧಿಯಲ್ಲೇ ಸಮೀಕ್ಷೆ ಪೂರ್ಣಗೊಳಿಸಲು ಖಡಕ್ ಸೂಚನೆ

**ಯುವ ಮಾರ್ಗ ಸುದ್ದಿ**

**ಸಿರವಾರ.ಅ.18–**ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಆಯೋಗದಿಂದ ನಡೆಯುತ್ತಿರುವ ಸಾಮಾಜಿಕ, ಶೈಕ್ಷಣಿಕ ಜಾತಿ ಗಣತಿ ಸಮೀಕ್ಷೆ ಕಾರ್ಯ ಭರದಿಂದ ಸಾಗಿದ್ದು, ತಾಲೂಕಿನಲ್ಲಿ ಈಗಾಗಲೇ ಶೇ 82% ಪೂರ್ಣಗೊಂಡಿದೆ. ಆದರೆ ಸರ್ಕಾರದಿಂದ ನೀಡಿದ ಅಂಕಿ ಅಂಶಗಳಿಗೂ, ಸಮೀಕ್ಷೆ ಮಾಡಿರುವ ಅಂಕಿಅಂಶಗಳು ಹೊಂದಾಣಿಕೆಯಾಗದ ಹಿನ್ನಲೆಯಲ್ಲಿ ಪ್ರತಿಯೊಂದು ಮನೆಗಳಿಗೆ ಸಮೀಕ್ಷೆದಾರರು, ಅಧಿಕಾರಿಗಳು ಬೇಟಿ ನೀಡಿ, ಹಗಲು ರಾತ್ರಿ ಸಮೀಕ್ಷೆಯಲ್ಲಿ ತೊಡಗಿಕೊಂಡಿದ್ದಾರೆ. ಪಟ್ಟಣದ ಬಾಲಕೀಯರ ಪ್ರೌಢ ಶಾಲೆಯಲ್ಲಿ ಅದಿಕಾರಿಗಳು ಸಮೀಕ್ಷೆಯಿಂದ ಹೊರಗುಳಿದವರ ಮಾಹಿತಿ ಪಡೆದು ನೊಂದಣಿ ಮಾಡುತ್ತಿರುವ ಕೇಂದ್ರಕ್ಕೆ ಸಹಾಯಕ ಆಯುಕ್ತರಾದ ಗಜಾನನ ಬಾಳೆ ಬೇಟಿ ನೀಡಿ. ಸಮೀಕ್ಷೆ ಪೂರ್ಣಗೊಳಲು ಕೇಲವೆ ಗಂಟೆಗಳು ಬಾಕಿ ಇವೇ. ಎಲ್ಲಾರೂ ಕೈ ಜೊಡಿಸಿ ನೊಂದಣಿ ಮಾಡಿಸಬೇಕು.100% ನೊಂದಣಿಗೆ ಶ್ರಮಿಸಬೇಕು ಎಂದು ಸಮೀಕ್ಷಾದಾರರಿಗೆ ಖಡಕ್ ಸೂಚನೆ ನೀಡಿದರು.



ಸಾರ್ವಜನಿಕರು ಯಾರೂ ನೊಂದಣಿ ಮಾಡಿಸಿಲ ಅವರು ಸಹ ಸ್ವಯಂ ಪ್ರೇರಿತವಾಗಿ ನೊಂದಣಿ ಮಾಡಿಸಿಕೊಳಿ ಎಂದರು. ಸಿರವಾರ ತಹಸೀಲ್ದಾರ ಅಶೋಕಪವಾರ, ತಾ.ಪಂ ಇಓ ಶಶಿಧರ ಸ್ವಾಮಿ, ಪ.ಪಂ ಮುಖ್ಯಾಧಿಕಾರಿ ಸುರೇಶ ಶೆಟ್ಟಿ, ಸಿಡಿಪಿಓ ಗೋಕುಲ ಸಾಬ್, ಪಿಡಿಓ ಪ್ರದೀಪ್ ಗೌಡ, ಪ್ರಸಾದ್, ವಿಜಯ, ಶಿಕ್ಷಕರಾದ ಮಹೇಶ, ದೇವೆಂದ್ರನಾಯಕ,ಬಸವರಾಜ, ಚನ್ನವೀರಯ್ಯಸ್ವಾಮಿ, ಮಹಿಬೂಬ ಪಾಷಸೇರಿದಂತೆ ಇನ್ನಿತರರು ಇದ್ದರು.

# ತುಂಗಭದ್ರಾ ಹಂಗಾಮಿ ಕಾರ್ಮಿಕರ ಹೋರಾಟ ತಾತ್ಕಾಲಿಕ ಮೂಂದೂಡಿಕೆ :ಮುಖ್ಯ ಅಭಿಯಂತರ ಲಕ್ಷ್ಮಣ ಭೇಟಿ

**ಯುವ ಮಾರ್ಗ ಸುದ್ದಿ**



**ಸಿರವಾರ, ಅ.18–**ತುಂಗಭದ್ರಾ ಎಡದಂಡೆ ಕಾಲುವೆಯ ಹಂಗಾಮಿ ಕಾರ್ಮಿಕರ 3ತಿಂಗಳ ವೇತನ ಪಾವತಿ, ಕಾರ್ಮಿಕರ ಇಎಸ್ ಐ. ಇಪಿಎಫ್ ಸೇರಿದಂತೆ ಹಲವಾರು ಬೇಡಿಕೆ ಪರಿಹರಿಸಲು ಕಳೆದ 22 ದಿನಗಳಿಂದ ಪಟ್ಟಣದ ನೀರಾವರಿ ಇಲಾಖೆಯ ಕಚೇ–ರಿಯ ಮುಂದೆ ನಡೆದ ಈ ಪ್ರತಿಭಟನೆಯ ಸ್ಥಳಕ್ಕೆ ತುಂಗಭದ್ರಾ ಎಡದಂಡೆ ಮುನಿರಾಬಾದ್ ಅಭಿಯಂತರಾದ ಲಕ್ಷಣ ನಾಯಕ ಗುರುವಾರ ಭೇಟಿ ನೀಡಿ, ಪ್ರತಿಭಟನಾಕಾರರ ಜೊತೆ ಹಾಗೂ ರೈತರ ನೀರಿನ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದು ಕೆಳಭಾಗದ ರೈತರಿಗೆ ನೀರುಹರಿಸಿ, ಹಂಗಾಮಿ ಕಾರ್ಮಿಕರ ಬಾಕಿ ವೇತನ ಒಂದು ತಿಂಗಳ ಒಳಗೆ ಪರಿಶೀಲನೆ ಮಾಡಿ, ವೇತನ ಪಾವತಿಗೆ ಕ್ರಮ,ಕಾರ್ಮಿಕರ ಬೇಡಿ ಕೆಗಳನ್ನು ಪರಿಹರಿಸುವುದು, ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮದ ಬಗ್ಗೆ ಪತ್ರ ನೀಡಿದರು.

ನಂತರ ಪ್ರತಿಭಟನಾಕಾರರು, ಮುಖ್ಯ ಅಭಿಯಂತರರ ಭರವಸೆ ಚರ್ಚೆ ಮಾಡಿ,ನ.17ರ ಒಳಗೆ ನಮ್ಮ ಬೇಡಿಕೆ ಈಡೆರದಿದ್ದಲ್ಲಿ ನವೆಂಬರ್ 17ರಂದು ಸಿರವಾರ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ರಸ್ತೆತಡೆಯ ಮಾಡಲಾಗುತ್ತದೆ. ತಾತ್ಕಾಲಿಕವಾಗಿ ಪ್ರತಿಭಟನೆ ಮುಂದೂಡಲಾಗಿದೆ ಹಂಗಾಮಿ ಕಾರ್ಮಿಕರ ಸಂಘಟನೆ ಪದಾಧಿಕಾರಿಗಳಾದ ಅಡವಿರಾವ್ ಹೇಳಿದರು.. ಈ ಸಂದರ್ಭದಲ್ಲಿ ರಾಮಣ್ಣ, ಸಿರವಾರ ತಾಲ್ಲೂಕು ಅಧ್ಯಕ್ಷ ಅಮರೇಗೌಡ ಲಕ್ಕಂದಿನ್ನಿ, ಶರಣಪ್ಪ ಕವಿತಾಳ, ಆದಿ ಕವಿತಾಳ,

ರುಖಪ್ಪ ಮಾಡಗಿರಿ,ಹನುಮಂತಪ್ಪ, ಸಿದ್ದಪ್ಪಗೌಡ, ಹಂಪಯ್ಯ, ವೀರೇಶ, ಹನುಮಂತ ಅಂಬಿಗೇರೆ, ರಮೇಶ, ಭೀಮರಾಜ್ ಮಾರಪ್ಪ ಯಲ್ಲಪ್ಪ, ಮಹೇಶ,ಮೌನೇಶ ಗೊಲದಿನ್ನಿ, ವೆಂಕಟೇಶ, ಬಾಷ, ರಾಜೇಶ, ಮಾರಪ್ಪ ನಾಯಕ ಹರವಿ, ಮುದಕಪ್ಪ ಯರಮರಸ್ ಅಧೀಕ್ಷಕ ಅಭಿಯಂತರ ಸತ್ಯನಾರಾಯಣ ಶೆಟ್ಟಿ, ಪ್ರಭಾರಿ ಕಾರ್ಯ ಪಾಲಕ ಅಭಿಯಂತರಾದ ವಿಜಯಲಕ್ಷ್ಮಿ ಪಾಟೀಲ, ಸಿಪಿಐ ಶಶಿಕಾಂತ ಎಂ. ಪಿಎಸ್ ಐ ವೆಂಕಟೇಶ ನಾಯಕ ಸೇರಿದಂತೆ ಅನೇಕರು ಇದ್ದರು.

# ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘದ 7 ನೇ ತಾಲೂಕ ಸಮ್ಮೇಳನ



**ಯುವ ಮಾರ್ಗ ಸುದ್ದಿ**

**ಮಾನ್ವಿ:ಅ.18–**
ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸುಪ್ರೀಂಕೋರ್ಟ್ ತೀರ್ಮಾನದಂತೆ 36 ಸಾವಿರ ರೂ.ವೇತನ ನೀಡುತ್ತಿಲ್ಲ. ಗ್ರಾ.ಪಂ.ನೌಕರರು ಜನಪ್ರತಿನಿಧಿಗಳು ನೀಡುವ ಆಶ್ವಾಸನೆ ನಂಬದೇ ನಿರಂತರ ಹೋರಾಟದ ಮೂಲಕ ನಮ್ಮ ಆಶೋತ್ತರಗಳನ್ನು ಈಡೇರಿಸಿಕೊಳ್ಳಬೇಕು ಎಂದು ಸಿಐಟಿಯು ರಾಜ್ಯ ಉಪಾಧ್ಯಕ್ಷ ಆರ್.ಎಸ್.ಬಸವರಾಜ ಕರೆ ನೀಡಿದರು.

ಪಟ್ಟಣದ ತಾಲೂಕ ಪಂಚಾಯತಿ ಸಭಾಂಗಣದಲ್ಲಿ ಸಿಐಟಿಯು ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘದ 7 ನೇ ತಾಲೂಕ ಸಮ್ಮೆ?ಳನವನ್ನು ಉದ್ಘಾಟಿಸಿ ಮಾತನಾಡಿದರು. ಸರಕಾರಗಳು ಕಾರ್ಮಿಕರ ಏಳ್ಗೆ ಬಗ್ಗೆ ಕಾಳಜಿ ತೋರುವಲ್ಲಿ ವಿಫಲವಾಗಿವೆ. ಉದಾರೀಕರಣ ನೀತಿಯಿಂದ ದೇಶದಲ್ಲಿ ಸಮಾನತೆ ಮಾಯವಾಗಿದ್ದು, ಕೇಂದ್ರ ಮತ್ತು ರಾಜ್ಯ ಸರಕಾರಗಳು ಬಂಡವಾಳ ಶಾಹಿಗಳ ಪರವಾಗಿರುವ ಯೋಜನೆಗಳನ್ನು ಜಾರಿಗೆ ಮಾಡುತ್ತಿವೆ. ಕಾರ್ಮಿಕರ ಬೇಡಿಕೆಗಳನ್ನು ಗಾಳಿಗೆ ತೂರಿ ಶ್ರಿ?ಮಂತರಿಗೆ ಮಣೆ ಹಾಕುತ್ತಿವೆ. ಕಾರ್ಮಿಕ ಇಲಾಖೆಯ ನಿಯಮಗಳನ್ನು ಪದೇ ಪದೆ ಮಾರ್ಪಾಡು ಮಾಡುತ್ತಿರುವ ಪರಿಣಾಮ ಗ್ರಾ.ಪಂ. ನೌಕರರು ತೊಂದರೆಗೀಡಾಗುತ್ತಿದ್ದಾರೆ. ನಮ್ಮ ಬೇಡಿಕೆ ಈಡೇರಲು ನಿರಂತರ ಹೋರಾಟ ಅವಶ್ಯವಾಗಿದೆ ಎಂದು ಹೇಳಿದರು.

ಪ್ರತಿ3 ವರ್ಷಕ್ಕೊಮ್ಮೆ ನಡೆಯಬೇಕಿದ್ದ ಗ್ರಾ.ಪಂ.ನೌಕರರ ತಾಲೂಕ ಸಮ್ಮೇಳನ ಅನಿವಾರ್ಯ ಕಾರಣಗಳಿಂದ ಮುಂದೂಡಲ್ಪಟ್ಟಿದೆ. ನಮ್ಮ ಅನೇಕ ಸವಾಲುಗಳ ಜೊತೆಗೆ ಈ ಸಮ್ಮೇಳನ ನಡೆಯುತ್ತಿದ್ದು ಇದುವರೆಗೂ ನಮ್ಮ ಗುರಿಯನ್ನು ತಲುಪಲು ಸಾಧ್ಯವಾಗಿಲ್ಲ ಎಂದು ಆರ್.ಎಸ್.ಬಸವರಾಜ ಕಳವಳ ವ್ಯಕ್ತಪಡಿಸಿದರು.

ಸಿಐಟಿಯು ತಾಲೂಕ ಅಧ್ಯಕ್ಷ ಹೆಚ್.ಶರ್ಫುದ್ದೀನ್ ಪೋತ್ನಾಳ ಮಾತನಾಡಿ ಭಾರತ ಸಂವಿಧಾನದಲ್ಲಿ ಪ್ರತಿಯೊಬ್ಬ ಪ್ರಜೆಗೂ ಮೂಲಭೂತ ಸೌಲಭ್ಯ ನೀಡುವಲ್ಲಿ ಸ್ಥಳೀಯ ಸಂಸ್ಥೆಗಳ ಪಾತ್ರ ಬಹುಮುಖ್ಯವಾಗಿದ್ದು ನೌಕರರು ತಮ್ಮ ಕೆಲಸ ಕಾರ್ಯಗಳಲ್ಲಿ ನಿಷ್ಠೆ, ಪ್ರಾಮಾಣಿಕತೆಯಿಂದ ಮಾಡಬೇಕು. ಗ್ರಾ.ಪಂ.ನೌಕರರ ಮೂಲಭೂತ ಸಮಸ್ಯೆಗಳಿಗೆ ಮೂಲ ಪರಿಹಾರ ಸಂಘಟನೆ ಹಾಗೂ ಹೋರಾಟದ ಹಾದಿಯೇ ಅಸ್ತ್ರವಾಗಿದೆ ಎಂದರು.

ಗ್ರಾ.ಪಂ.ನೌಕರರ ಪರವಾಗಿ ನಡೆಸಿದ ಅನೇಕ ಹೋರಾಟಗಳ ಫಲವಾಗಿ ಅನುಮೋದನೆ, ನೇರವಾಗಿ ಖಾತೆಗೆ ವೇತನ ಪಾವತಿ, ವ್ಯಕ್ತಿಗಳ ಕಿರುಕುಳ ತಡೆಯುವುದು ಸೇರಿದಂತೆ ಇನ್ನಿತರ ಬೇಡಿಕೆಗಳು ಈಡೇರಿಲು ಸಾಧ್ಯವಾಗಿದೆ. ನಮ್ಮ ನೌಕರರ ಶ್ರಮಕ್ಕೆ ತಕ್ಕ ಪ್ರತಿಫಲ ಲಭಿಸಲು ಇನ್ನೂ ಹೆಚ್ಚಿನ ರೀತಿಯಲ್ಲಿ ಹೋರಾಟ ನಡೆಸುವೊಂದೇ ಏಕೈಕ ಮಾರ್ಗವಾಗಿದೆ ಎಂದು ಹೆಚ್.ಶರ್ಫುದ್ದೀನ್ ಪೋತ್ನಾಳ ತಿಳಿಸಿದರು.

ಈ ಸಮ್ಮೇಳನ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆಂಜನೇಯ ಗೋರ್ಕಲ್ ವಹಿಸಿದ್ದರು. ಈ ಸಂದರ್ಭದಲ್ಲಿ ಗ್ರಾ.ಪಂ.ನೌಕರರ ಸಂಘದ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಮನ್ಸಾಲಾಪುರ, ಜಿಲ್ಲಾ ಪ್ರಧಾನಕಾರ್ಯದರ್ಶಿ ಆಂಜನೇಯ ಮಾಡಗಿರಿ, ಸಿಡಬ್ಲ್ಯುಸ್‌ಜಿಲ್ಲಾಧ್ಯಕ್ಷ ರುದ್ರಪ್ಪನಾಯಕ, ಗ್ರಾ.ಪಂ.ನೌಕರರ ಸಂಘದ ತಾಲೂಕ ಅಧ್ಯಕ್ಷ ಅಂಬಣ್ಣನಾಯಕ ಬ್ಯಾಗವಾಟ್, ಸಿಐಟಿಯು ತಾಲೂಕ ಕಾರ್ಯದರ್ಶಿ ಸಿದ್ದಲಿಂಗಯ್ಯ, ಕಾರ್ಯಾಧ್ಯಕ್ಷ ಮಹ್ಮದ್ ನೀರಮಾನ್ವಿ ಸೇರಿದಂತೆ ಅನೇಕರು ಭಾಗವಹಿಸಿದ್ದರು. ಹನುಮಂತ ರೆಡ್ಡಿ ಪ್ರಾರ್ಥಿಸಿದರು ಅಂಬಣ್ಣನಾಯಕ ಬ್ಯಾಗವಾಟ್ ಪ್ರಾಸ್ತಾವಿಕ ನುಡಿಗಳನ್ನಾಡಿದರು ವೆಂಕಟೇಶ ಕೋನಾಪುರಪೇಟೆ ಸ್ವಾಗತಿಸಿದರು ಜಗದೀಶಸ್ವಾಮಿ ಕುರ್ಡಿ ಕಾರ್ಯಕ್ರಮ ನಿರೂಪಿಸಿದರು ವೆಂಕೋಬ ವಂದಿಸಿದರು.

# ವಿದ್ಯಾರ್ಥಿಗಳು, ಉಪನ್ಯಾಸಕರಿಂದ ರಕ್ತದಾನ



**ಬೀದರ್:ಅ.18–** ಇಲ್ಲಿಯ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಶಿಬಿರದಲ್ಲಿ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ಸೇರಿ 18 ಮಂದಿ ರಕ್ತದಾನ ಮಾಡಿದರು.

ಬೀದರ್ ರಕ್ತನಿಧಿ ಕೇಂದ್ರದ ಸಿಬ್ಬಂದಿ ರಕ್ತ ಸಂಗ್ರಹಿಸಿದರು. 18 ಯುನಿಟ್ ರಕ್ತ ಸಂಗ್ರಹವಾಯಿತು.

ರಕ್ತದಾನ ಮಾನವೀಯ ಕಾರ್ಯವಾಗಿದೆ. ಅರ್ಹರು ಕನಿಷ್ಠ ವರ್ಷಕ್ಕೆ ಒಮ್ಮೆಯಾದರೂ ರಕ್ತದಾನ ಮಾಡಬೇಕು ಎಂದು ಉದ್ಘಾಟನೆ ನೆರವೇರಿಸಿದ ಬಿ.ಆರ್.ಐ.ಎಂ.ಎಸ್. ಪಥಾಲಜಿ ವಿಭಾಗದ ಡಾ. ಸಿದ್ಧಾರ್ಥ ಸೂರ್ಯವಂಶಿ ಹೇಳಿದರು.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H